ಬಿ. ಎಸ್. ಮಯೂರ, ಎಂ. ಎಸ್ಸಿ.

ಅಲೆಗ್ಸಾಂಡರ್ ಗ್ರಹಾಂ ಬೆಲ್

ಪ್ರಚಾರ ಪುಸ್ತಕಮಾಲೆ—೧೬೮

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೧೯೭೦

ಪ್ರಚಾರ ಪುಸ್ತಕಮಾಲೆ-೧೬೮

ಅಲೆಗ್ಸಾಂಡರ್ ಗ್ರಹಾಂ ಬೆಲ್

ಬಿ. ಎಸ್. ಮಯೂರ, ಎಂ. ಎಸ್ಸಿ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೭೦

ಮೊದಲನೆಯ ಮುದ್ರಣ : ೧೯೭೦

ಪ್ರಕಾಶಕರು :

ಡೈರೆಕ್ಟರ್, 'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು-೬

ಸಾಧಾರಣ ಪ್ರತಿ : ೨೫ ಪೈಸೆ
ಉತ್ತಮ ಪ್ರತಿ : ೩೭ ಪೈಸೆ

ಮುದ್ರಕರು :
ಶ್ರೀ ರಾಜೇಶ್ವರಿ ಪ್ರಿಂಟಿಂಗ್ ಪ್ರೆಸ್, ಮೈಸೂರು

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯುವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶಹೊಂದದ ಸಾಮಾನ್ಯಜನರ ಹೃದಯವನ್ನು ಬೆಳಗಿಸಿ ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶೆವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಪ್ರಸಾರಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ ಸುಲಭಗ್ರಾಹ್ಯವೂ ಆದ ಕನ್ನಡಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ

ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನಗಳು ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ. ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾನಿಲಯದ ವಿದ್ಯೆಯ ಸೌಲಭ್ಯ ವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕ ವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕ ವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗು ತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕೆ ಮೂಲಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು, ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನಮನೆಯಿಂದ ಹೊರ ಬಿದ್ದಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ

ಮಾಲೆಯಲ್ಲಿ ಈಗಾಗಲೇ ಭೌತವಿಜ್ಞಾನ ರಸಾಯನವಿಜ್ಞಾನ, ಪ್ರಾಣಿವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ, ಮುಂತಾದ ವಿಷಯಗಳನ್ನು ಕುರಿತ ನೂರ ಅರವತ್ತೇಳು ಪುಸ್ತಕಗಳು ಪ್ರಕಟವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಶ್ರೀಮತಿ ಬಿ. ಎಸ್. ಮಯೂರ ಅವರ 'ಅಲೆಗ್ಸಾಂಡರ್ ಗ್ರಹಾಂ ಬೆಲ್' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಮೈಸೂರು
೧೫-೮-೧೯೭೦

ದೇ. ಜವರೇಗೌಡ. ಎಂ.ಎ
ಉಪಕುಲಪತಿ

ಅರಿಕೆ


ಇಂದು ದೇದೀಪ್ಯಮಾನವಾಗಿ ಉರಿಯುತ್ತಿರುವ ವಿಜ್ಞಾನ ದೀವಿಗೆಯನ್ನು ಪುಷ್ಟಿಗೊಳಿಸಿದವರಲ್ಲಿ ಅಲೆಗ್ಸಾಂಡರ್ ಗ್ರಹಾಂ ಬೆಲ್ ಒಬ್ಬ. ಸಾರ್ಥಕ ಜೀವನವನ್ನು ನಡೆಸಿದ ಈ ವಿಜ್ಞಾನಿ ಘನವಾದ ಕಾರ್ಯಗಳನ್ನು ಮಾಡಿ ವಿಜ್ಞಾನ ಜಗತ್ತಿನಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದಾನೆ. ಅವನು ಕಂಡುಹಿಡಿದ 'ಟೆಲಿಫೋನ್' ವಿಶ್ವಜೀವನದ ಮಹತ್ಸಾಧನೆಗಳಲ್ಲಿ ಒಂದು. ಅದರಿಂದ ದೂರ ಹತ್ತಿರವಾಗಿದೆ; ಕಾಲ ಉಳಿತಾಯ ವಾಗಿದೆ; ದೇಶ ದೇಶಗಳ ಸಂಬಂಧ ಸುಲಭವಾಗಿದೆ. ಇದರಿಂದ ಈ ವಿಜ್ಞಾನಿಯ ಮಹತ್‌ಸಾಧನೆ ಸಫಲವಾಗಿದೆ. ವಿಶ್ವದ ಎಲ್ಲ ಕಡೆಗೂ ಕಂಗೊಳಿಸುವ ಈ 'ಟೆಲಿಫೋನ್' ಅಲೆಗ್ಸಾಂಡರ್ ಗ್ರಹಾಂ ಬೆಲ್ ಸಲ್ಲಿಸಿದ ಚಿರಂತನ ಕಾಣಿಕೆಯಾಗಿದೆ.

ಅಲೆಗ್ಸಾಂಡರ್ ಗ್ರಹಾಂ ಬೆಲ್‌ನ ಪ್ರತಿಭೆಯ ಒಂದು ಮುಖ ಈ 'ಟೆಲಿಫೋನ್' ಆದರೆ, ಇನ್ನೊಂದು ಮುಖ ವಾಕ್ ಶ್ರವಣ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು. ಅದು ಅವನಿಗೆ ಎಷ್ಟು ಪ್ರಿಯ ಎಂದರೆ ಅವನೇ ಹೇಳುತ್ತಾನೆ: "I would rather be remembered as a teacher of the deaf than as the Inventor of the Telephone" ಎಂದು. ಕಾರಣ, ಅವನ ಜೀವನದ ಸಂಗಾತಿ ಮತ್ತು ಸ್ಫೂರ್ತಿದಾಯಿನಿ ಮಾಬಲ್ ಶಬ್ದಪ್ರಪಂಚಕ್ಕೇ ಎರವಾಗಿದ್ದಳು. "ನನ್ನ ಮಾಬಲ್‌ಳಿಗೆ ಕಿವಿ ಬೇಕು" ಎಂಬ ಅವನ ಮನದ ಕೂಗು ಅವನನ್ನು ಕಾರ್ಯರಂಗದಲ್ಲಿ ಮುಂದೆ ಮುಂದೆ ನಡೆಸಿತು. ಅವನ ಈ ಮಹತ್ ಸಾಧನೆಗಳಲ್ಲಿ ಮಾಬಲಳ ಪಾತ್ರವೂ ಅಷ್ಟೇ

ದೊಡ್ಡದು ಒಟ್ಟಿನಲ್ಲಿ ಈ ದಂಪತಿಗಳ ಜೀವನ ಅನುಕರಣೀಯ, ಆದರ್ಶಪೂರ್ಣ.

ಅದರಿಂದ ಇಂಥ ಜೀವನವನ್ನು, ಇಂಥ ಸಾಧನೆಗಳನ್ನು ನನ್ನ ನಾಡಿನ ಜನರಿಗೆ ಪರಿಚಯ ಮಾಡಿಕೊಡಬೇಕೆಂಬ ಹಂಬಲ ಈ ಪುಟ್ಟ ಪುಸ್ತಕವಾಗಿ ರೂಪುಗೊಂಡಿತು. ಈ ರೂಪಕ್ಕೆ ಕಾರಣ ಮತ್ತು ಬೆಂಬಲ ನನ್ನ ಅಕ್ಕ, ಭಾವಂದಿರಾದ ಶ್ರೀಮತಿ ಬಿ.ಎಸ್. ರುಕ್ಕಮ್ಮ, ಎಂ.ಎ ಮತ್ತು ಶ್ರೀ ಪ. ವಿ. ಚಂದ್ರಶೇಖರ, ಎಂ.ಎ. ಅವರು. ಇವರಿಗೆ ನಾನು ಚಿರಋಣಿ, ಈ ಬರವಣಿಗೆಯ ಪ್ರಕಟಣೆಯಲ್ಲಿ ನೆರವನ್ನಿತ್ತ ಪ್ರಸಾರಾಂಗದ ಡಾ|| ಪ್ರಭುಶಂಕರ್, ಎಂ.ಎ, ಪಿ.ಎಚ್ ಡಿ, ಮತ್ತು ಶ್ರೀ ಆರ್. ಎಲ್. ಅನಂತರಾಮಯ್ಯ, ಎಂ.ಎ. ಅವರಿಗೂ ಚಿತ್ರಗಳನ್ನು ಬರೆದುಕೊಟ್ಟ ಶ್ರೀ ಎಚ್. ಜೆ, ಮಹದೇವಯ್ಯ ಅವರಿಗೂ ನನ್ನ ವಂದನೆಗಳು. ಹಾಗೆ, ದೂರವಾಣಿಯ ಬಗೆಗೆ ಇತ್ತೀಚಿನ ಮಾಹಿತಿಯನ್ನೊದಗಿಸಿದ ಶ್ರೀ ಬಿ. ವಿ. ಶಾಮಣ್ಣ, ಬಿ.ಇ. ಮತ್ತು ಶ್ರೀ ಎನ್. ಜಿ. ಕೃಷ್ಣಪ್ರಸಾದ್, ಬಿ.ಇ ಇವರಿಗೂ ನನ್ನ ವಂದನೆಗಳು.

೧೫–೮–೧೯೭೦ ಬಿ. ಎಸ್. ಮಯೂರ
ಮಹಾರಾಣಿಯವರ ಕಾಲೇಜು
ಬೆಂಗಳೂರು



ಅಲೆಗ್ಸಾಂಡರ್ ಗ್ರಹಾಂ ಬೆಲ್

ಅಲೆಗ್ಸಾಂಡರ್ ಗ್ರಹಾಂ ಬೆಲ್

"Vous etes mon ami, Je vous aime de tout mon coeur. Venez avec moi à paris."

"ನೀವು ನನ್ನ ಗೆಳೆಯರು, ನಾನು ನಿಮ್ಮನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತೇನೆ. ನನ್ನೊಡನೆ ಪ್ಯಾರಿಸ್‌ಗೆ ಬನ್ನಿ" ಎಂದು ಅದು ತನ್ನ ಪುಟ್ಟ ಭಾಷಣವನ್ನು ಮುಗಿಸಿದಾಗ ಆವರಣದಲ್ಲಿ ಕಿಕ್ಕಿರಿದು ತುಂಬಿದ್ದ ಜನ ಸಖೇದಾಶ್ಚರ್ಯಗಳಿಂದ, ಸಂತೋಷದಿಂದ ಮೂಕರಾಗಿ, ಚಪ್ಪಾಳೆ ಮಾತ್ರ ತಟ್ಟಿದರು.

ಹೀಗೆ ನಮ್ರವಾಗಿ ಎಲ್ಲರನ್ನೂ ತನ್ನೂರಿಗೆ ಆಹ್ವಾನಿಸಿದ್ದು ಮತ್ತಾರೂ ಅಲ್ಲ–ಒಂದು ಯಂತ್ರ! ವಿಯನ್ನಾದ ವಿಜ್ಞಾನಿ ವಾನ್ ಕೆಂಪ್ಲನ್ ತಯಾರಿಸಿದ್ದ ಯಂತ್ರವನ್ನು ಸರ್ ಚಾರ್ಲ್ಸ್ ವ್ಹೀಟಸ್ಟನ್ ಇಂಗ್ಲೆಂಡಿನಲ್ಲಿ ಪ್ರದರ್ಶಿಸಿದ್ದನು. ಇಂಗ್ಲೆಂಡಿನಲ್ಲಿ ತಂದೆಯೊಡನಿದ್ದು ಶಿಕ್ಷಣ ಪಡೆಯುತ್ತಿದ್ದ ಮಗನನ್ನು ಸ್ಕಾಟ್ಲೆಂಡಿಗೆ ಕರೆದುಕೊಂಡು ಹೋಗಲು ಬಂದಿದ್ದ ಪ್ರೊ|| ಬೆಲ್ ಅಲ್ಲಿ ನಡೆಯುತ್ತಿದ್ದ ಪ್ರದರ್ಶನಕ್ಕೆ ಮಗನನ್ನು ಕರೆದುಕೊಂಡು ಹೋಗಿದ್ದನು. ಆ ಯಂತ್ರ ಒಂದು ಪೆಟ್ಟಿಯಾಕಾರದ ಡಬ್ಬ. ಅದನ್ನು ಖಾನಿಗಳನ್ನಾಗಿ ವಿಂಗಡಿಸಿ, ಮಧ್ಯ ಕೀಲುಗಳನ್ನು ಸೇರಿಸಿದ್ದರಿಂದ ಅದು ದವಡೆಗಳಂತೆ ಅಲ್ಲಾಡುತ್ತಿದ್ದಿತು. ಅದನ್ನು ಒಂದು ಕ್ರಮದಲ್ಲಿ ಅಲ್ಲಾಡಿಸಿದರೆ ಕೆಲವು ವ್ಯಂಜನಗಳನ್ನೂ ಸ್ವರಗಳನ್ನೂ ಹೊರಡಿಸುತ್ತಿತ್ತು. ಸ್ವಲ್ಪ ಅಳನಡಿಸಿದರೆ ಕೆಲವು ಇಡೀ ಪದಗಳನ್ನು ಉಚ್ಚರಿಸುತ್ತಿತ್ತು. ಸ್ವಲ್ಪ ಹಾಗೆ ಹೀಗೆ ಮಾಡಿ ಅದರ

ಹತ್ತಿರ ಒಂದು ಪುಟ್ಟ ಭಾಷಣವನ್ನೇ ಸರ್ ಚಾರ್ಲ್ಸ್ ವ್ಹೀಟಸ್ಟನ್ ಮಾಡಿಸಿದನು

ಅದೇ ಗುಂಗಿನಲ್ಲಿ ತಂದೆ ಮಕ್ಕಳಿಬ್ಬರೂ ಪ್ರದರ್ಶನಾಲಯ ದಿಂದ ಹೊರಕ್ಕೆ ಬಂದರು. ಊರಿನಲ್ಲಿ ತನ್ನ ಮೂವರು ಮಕ್ಕಳಿಗೂ ಯಂತ್ರವನ್ನೂ ಅದರ ಕೆಲಸವನ್ನೂ ವಿವರಿಸಿದ ತಂದೆ, ಅದಕ್ಕಿಂತ ಉತ್ತಮವಾದ ಒಂದು ಮಾತನಾಡುವ ಯಂತ್ರವನ್ನು ತಯಾರಿಸಲು ಮಕ್ಕಳಿಗೆ ಪ್ರಚೋದಿಸಿದನು. "ಹೇಗೆ ಎಷ್ಟು ಬೇಗ ಮಾಡುವಿರೋ ನೋಡೋಣ" ಎಂದು ಹೇಳಿ, ಅವರಿಗೇ ಪೂರ್ತಿ ಅವಕಾಶವನ್ನು ಕೊಟ್ಟು ತಾನು ಹಿಂದಕ್ಕೆ ಸರಿದನು.

ಯಂತ್ರವನ್ನು ಪ್ರತ್ಯಕ್ಷವಾಗಿ ನೋಡಿಬಂದ ಕಿರಿಯಮಗ ಅಲೆಗ್ಸಾಂಡರ್ ಬೆಲ್ ನ ಉತ್ಸಾಹ ಉದ್ವೇಗಗಳಿಗೆ ಎಣೆಯೇ ಇಲ್ಲದಾಯಿತು. ಅಣ್ಣಂದಿರಿಬ್ಬರೊಡನೆ ಇವನೂ ಆ ಕೆಲಸಕ್ಕೆ ತೊಡಗಿದನು. ಅವರಿಗೆ ಕ್ಷೇತ್ರವೇನೂ ಹೊಸದಾಗಿರಲಿಲ್ಲ. ತಂದೆ, ಪ್ರೊ|| ಬೆಲ್ ಸ್ವತಃ ವಾಕ್ಪಟುವಾಗಿದ್ದನು. ತಂದೆಯ ಪ್ರಭಾವ ಮಕ್ಕಳ ಮೇಲೆ ಸಾಕಷ್ಟಿತ್ತು. ಚಿಕ್ಕಂದಿನಲ್ಲೇ ಧ್ವನಿ ಶಾಸ್ತ್ರವನ್ನು ತಂದೆಯಿಂದ ಕಲಿತ ಮಕ್ಕಳು, ತಮ್ಮ ನಾಯಿಗೂ ಅಲ್ಪ ಸ್ವಲ್ಪ ಮಾತನಾಡುವುದನ್ನು ಕಲಿಸಿದ್ದರು. ಇದರ ಜೊತೆಗೆ ಅಲೆಗ್ಸಾಂಡರ್ ಬೆಲ್‌ಗೆ ಯಂತ್ರ ತಂತ್ರಗಳಲ್ಲಿಯೂ ಅಭಿರುಚಿ ಇತ್ತು. ತಮ್ಮ ಮನೆಯ ಹತ್ತಿರದ ಗಿರಣಿಯವನಿಗೆ ಹೊಟ್ಟನ್ನು ಕಾಳುಗಳಿಂದ ಬೇರೆ ಮಾಡಲು ಒಂದು ತಿರುಗುವ ಬ್ರಷ್‌ನ್ನು ಮಾಡಿಕೊಟ್ಟು ಅವನ ವಿಶ್ವಾಸಕ್ಕೆ ಪಾತ್ರನಾಗಿ ದ್ದನು.

ತಂದೆಯಿಂದ ಪ್ರಚೋದಿತರಾದ ಮಕ್ಕಳು ಹೆಚ್ಚು ಉತ್ಸಾಹ

ದಿಂದ ಕೆಲಸಕ್ಕೆ ತೊಡಗಿದರು. ಅದಕ್ಕಾಗಿ, ಮಾತನಾಡುವಾಗ ಬಾಯಿ ಅಲ್ಲಾಡುವ ಮಾದರಿಯನ್ನು ಸೂಕ್ಷ್ಮವಾಗಿ , ಆಳವಾಗಿ ಅಭ್ಯಸಿಸಿದರು. ಕಷ್ಟವಾದರೂ ಹಿಂಜರಿಯದೆ ಕೆಲಸಕ್ಕೆ ತೊಡಗಿದರು. ಒತ್ತಿದ ಹತ್ತಿ, ರಬ್ಬರ್, ತೆಳುವಾದ ರಬ್ಬರ್ ಪರೆ, ಇಂತಹವನ್ನು ಉಪಯೋಗಿಸಿ ಒಂದು ಬಾಯಿಯನ್ನೇನೋ ಮಾಡಿದರು. ಆದರೆ ಅದು ಬರೀ "ಮಾ ಮಾ" ಎಂದು ಮಾತ್ರ ಹೇಳುತ್ತಿತ್ತು. 'ಯಾತ್ರೆಗಾಗಿ ಯಾತ್ರಾಸ್ಥಳ' ವೆಂಬಂತೆ ಈ ಪ್ರಯೋಗ ಅವರಿಗೆ ಸಾಕಷ್ಟು ಅನುಭವವನ್ನು ಕೊಟ್ಟಿತು. ಅವರ ಈ ಯಂತ್ರವೇನೂ ಬಹಳ ಬೀಳಾಗಿರಲಿಲ್ಲ. ಒಮ್ಮೆ ಅವರು ಪ್ರಯೋಗ ನಿರತರಾಗಿ, ತಮ್ಮ ಯಂತ್ರದೊಡನೆ ಮಾತ ನಾಡುವುದರಲ್ಲಿ ತಲ್ಲೀನರಾಗಿದ್ದಾಗ, ಅವರ ನೆರೆ ಹೊರೆಯವರು "ಯಾಕೆ ಇವರು ಮಗುವನ್ನು ಅಳಿಸುತ್ತಾರೋ, ಸುಮ್ಮನಿರಿಸಲು ಬರುವುದಿಲ್ಲವೆಂದು ಕಾಣುತ್ತದೆ" ಎಂದುಕೊಂಡದ್ದು ಅನಂತರ ಇವರಿಗೆ ತಿಳಿದಾಗ, ಬಹಳ ಸಂತೋಷಪಟ್ಟರು. ಅವರಿಗೆ ಅತಿ ಮುಖ್ಯವಾಗಿದ್ದ ತಂದೆಯ ಪ್ರಶಂಸೆ, ಉತ್ತೇಜನ, ಈ ಪುಟ್ಟ ತಂತ್ರಜ್ಞರನ್ನು ಆನಂದ ಸಾಗರದಲ್ಲಿ ಮುಳುಗಿಸಿತು.

ತಂದೆ ತನ್ನ "ವಾಕ್ ದರ್ಶನ" ಶಾಸ್ತ್ರವನ್ನು ಬೆಳೆಸುತ್ತಿದ್ದನು. ಧ್ವನಿ ಹೊರಡುವಾಗ ಬಾಯಿಯಲ್ಲಿ ನಾಲಗೆಯ ಸ್ಥಾನವನ್ನ ವಲಂಬಿಸಿ ಕೆಲವು ಚಿಹ್ನೆಗಳನ್ನು ಮಾಡಿಕೊಂಡನು. ಆ ಚಿಹ್ನೆ ಗಳ ಪರಿಚಯವಿದ್ದರೆ ಎಂತಹ ಧ್ವನಿಯನ್ನಾದರೂ ಬರೆಯ ಬಹುದು. ಹಾಗೆ ಬರೆದ 'ಧ್ವನಿ'ಯನ್ನು ಚಿಹ್ನೆಯ ಪರಿಚಯ ವಿರುವ ಯಾರಾದರೂ ಓದಿ ಅದೇ ರೀತಿಯ ಧ್ವನಿಯನ್ನು, ಹಿಂದೆ ಕೇಳಿರದಿದ್ದರೂ, ಹೊರಡಿಸಬಹುದಾಗಿತ್ತು. ಈ ವಿಧಾನ

ಕ್ರಮೇಣ ಕಿವುಡರಿಗೆ ಮಾತನಾಡಲು ಕಲಿಸುವ ಯಶಸ್ವೀ ಸಾಧನವಾಯಿತು.

ತಂದೆಯ ಈ ವಾಕ್‌ದರ್ಶನ ವಿಧಾನವನ್ನು ಮಕ್ಕಳೂ ರೂಢಿಸಿ ಕೊಂಡಿದ್ದರು. ಧ್ವನಿಯನ್ನು ಹೊರಡಿಸಲು ನಾಲಗೆ, ಅಂಗಳು ಮತ್ತು ಹಲ್ಲುಗಳ ಪರಸ್ಪರ ಸ್ಥಳ ವಿನ್ಯಾಸಗಳನ್ನು ಕರಗತ ಮಾಡಿಕೊಂಡು ಬೇಕಾದ ಧ್ವನಿಯನ್ನು ಬರೆಯಲು ಓದಲು ಕಲಿತಿದ್ದರು. ಪ್ರೊ|| ಬೆಲ್ ಒಮ್ಮೆ ಈ ವಿಷಯವಾಗಿ ತನ್ನ ಭಾಷಣವಾದ ಮೇಲೆ ಸಭಿಕರು ಮಾಡಿದ, ಹೇಳಿದ ಧ್ವನಿಯನ್ನು ಹಲಗೆಯ ಮೇಲೆ ಬರೆದು ತೋರಿಸಿದನು. ತೆರೆಯ ಮರೆಯಲ್ಲಿ, ಸಭಿಕರು ಮಾಡಿದ ಧ್ವನಿ ಕೇಳಿಸದ ಕಡೆ, ನಿಂತಿರುತ್ತಿದ್ದ ಅವನ ಮಕ್ಕಳಲ್ಲಿ ಒಬ್ಬರು ಬಂದು ಅದನ್ನು ಓದಿ, ಅದೇ ಧ್ವನಿಯನ್ನು ಹೊರಡಿಸುತ್ತಿದ್ದರು.

ಒಮ್ಮೆ ಅಂತಹ ಸಭೆಯೊಂದರಲ್ಲಿ, ಸಭಿಕರೊಬ್ಬರು ಮರ ಕುಯ್ಯುವಾಗ ಆಗುವ ಧ್ವನಿಯನ್ನು ಬರೆಯಲು ಕೇಳಿದರು. ತಂದೆ ಅದನ್ನು ಚಿಹ್ನೆಗಳಲ್ಲಿ ಬರೆದು ಅಲೆಕ್‌ನನ್ನು ಕರೆಸಿ ಓದಲು ಹೇಳಿದನು. ಅವನು ಓದಿದಾಗ ಅದೇ ಧ್ವನಿ ಬಂದಿತು. ಸಭಿಕರು ಅತಿ ಸಂತೋಷದಿಂದ ಕೂಗಾಡಿದರು. ಅಲ್ಲಿಯೇ ಇದ್ದ ಅಧ್ಯಾಪಕರೊಬ್ಬರು ಒಂದು ಶಬ್ದವನ್ನುಚ್ಚರಿಸಿದರು. ಅದನ್ನು ಬರೆದಮೇಲೆ ಅಲೆಕ್ ಬಂದು ಆ ಶಬ್ದವನ್ನು ಅಷ್ಟೇ ಲೀಲಾಜಾಲ ವಾಗಿ ಉಚ್ಚರಿಸಿದನು. “ನಾನು ಆ ಶಬ್ದವನ್ನು ನೂರು ಬಾರಿ ಆಡಿತೋರಿಸಿದರೂ ನನ್ನ ಶಿಷ್ಯರು ತಪ್ಪುತ್ತಾರೆ. ನೀನು ಒಮ್ಮೆಯೂ ಕೇಳದೆ ಅದೆಷ್ಟು ಸುಲಭವಾಗಿ ಅದನ್ನು ಉಚ್ಚರಿಸಿದೆ!” ಎಂದು ಅವರು ಅಲೆಕ್‌ನ ಬೆನ್ನು ತಟ್ಟಿದರು. ಯಾವ

ಹಿನ್ನೆಲೆಯೂ ಇಲ್ಲದೆ ಶಬ್ದಗಳನ್ನು ಯಾಂತ್ರಿಕವಾಗಿ ಉಚ್ಚರಿಸಬಹುದೆಂಬ ವಿಷಯವೇ ಅವರನ್ನೂ, ಅಲೆಕ್‌ನನ್ನೂ ಬೆರಗು ಮಾಡಿತ್ತು.

ಸುಮಾರು ಹದಿನಾರು ವರ್ಷದ ಅಲೆಕ್ ಎಲ್ಗಿನ್ ಶಾಲೆಯೊಂದರಲ್ಲಿ ಮಾಸ್ತರಾಗಿ ಸೇರಿದನು. ಅಲ್ಲಿ ಅವನಿಗೆ ಬಹಳ ಕೆಲಸವಿಲ್ಲದೆ, ಧ್ವನಿ ಶಾಸ್ತ್ರವನ್ನೂ ಶಬ್ದಶಾಸ್ತ್ರವನ್ನೂ ಆಳವಾಗಿ ಅಭ್ಯಾಸಮಾಡಲು ಅವಕಾಶವಾಯಿತು. ಅಲ್ಲಿಯೇ ಶ್ರುತಿಕವೆ (tuning forks) ಗಳನ್ನು ಉಪಯೋಗಿಸಿ ಬೇಕಾದಷ್ಟು ಪ್ರಯೋಗಗಳನ್ನು ಮಾಡಿಕೊಂಡನು. ಮಧ್ಯೆ ಎಡಿನ್‌ಬರೋ ವಿಶ್ವವಿದ್ಯಾನಿಲಯಕ್ಕೆ ಹೋಗಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ವಾಕ್ಚಾತುರ್ಯವನ್ನು ಪಡೆದುಕೊಂಡನು. ಮುಂದಿನ ಕೆಲವು ವರ್ಷಗಳು ಅವನಿಗೆ ಉಸಿರಾಡಲೂ ಅವಕಾಶವಿಲ್ಲವೆಂಬಂತೆ ಕಳೆದು ಹೋಯಿತು. ಅಲೆಕ್‌ನ ತಾತನು ಮರಣಹೊಂದಿದ ಮೇಲೆ ಪ್ರೊ|| ಬೆಲ್, ಅವನ ಕೆಲಸ ವಹಿಸಿಕೊಳ್ಳಲು ಇಂಗ್ಲೆಂಡಿಗೆ ಹೋದನು. ಅಲ್ಲಿ ಅಲೆಕ್‌ಗೆ ಸರ್ ಚಾರ್ಲ್ಸ್ ವ್ಹೀಟ್‌ಸ್ಟನ್‌ರ ಪರಿಚಯವಾಯಿತು. ಅವರು ತಮ್ಮ "ಮಧುರ ತಂತಿವಾದ್ಯ" (enchanted lyre) ದ ಬಗ್ಗೆ ಅಲೆಕ್‌ಗೆ ಹೇಳಿದರು. ಅದರಲ್ಲಿ ಪಿಯಾನೋಗೆ ಉದ್ದವಾದ ಲೋಹದ ಕೊಳವೆಯೊಂದನ್ನು ಸೇರಿಸಿದ್ದರು. ಇದರ ಇನ್ನೊಂದು ತುದಿಯು, ಕೆಳಗಿನ ಕೋಣೆಯಲ್ಲಿನ ಒಂದು ಅನುನಾದಕ್ಕೆ (resonator) ಸೇರಿದ್ದಿತು. ಮೇಲಿನ ಕೋಣೆಯಲ್ಲಿ ಪಿಯಾನೋ ನುಡಿಸಿದರೆ, ಕೆಳಗಿನ ಕೋಣೆಯವರಿಗೆ ಮೃದು ಮಧುರವಾದ ಸುಸ್ಪಷ್ಟ ಸಂಗೀತ ಕೇಳಿಸುತ್ತಿತ್ತು. ಕೊಳವೆಯನ್ನು ಅಡಗಿಸಿಟ್ಟಿದ್ದರಿಂದ ಸಾಮಾನ್ಯರಿಗೆ ಅದು ಇಂದ್ರಜಾಲದಂತೆ ಇದ್ದಿತು.

ಈ ಸಮಯದಲ್ಲಿ ಬೆಲ್ ರ ಮನೆಗೆ ಕತ್ತಲೆ ಕವಿಯಲಾರಂಭಿಸಿತು. ಕಿರಿಯ ಮಗ ಎಡ್ವರ್ಡ್, ತನ್ನ ಹದಿನೆಂಟನೇ ವಯಸ್ಸಿನಲ್ಲಿ ಕ್ಷಯ ರೋಗಕ್ಕೆ ಬಲಿಯಾದನು. ಮೂರು ವರ್ಷಗಳ ನಂತರ ಹಿರಿಯಮಗ ಮಾಲ್‌ವಿಲ್ ಅದೇ ರೋಗಕ್ಕೆ ಬಲಿಯಾದನು. ಅನಂತರ ಅಲೆಕ್ ಜ್ವರದಿಂದ ಮಲಗಿದಾಗ ಅವನ ತಂದೆ ತಾಯಿ ನಡುಗಿದರು. ವೈದ್ಯರು ಅವನಿಗೆ "ಆರು ತಿಂಗಳು ಆಯುಸ್ಸು" ಎಂದಾಗ, ಅವರು ಕಂಗೆಟ್ಟು, ಅವನನ್ನಾದರೂ ಉಳಿಸಿಕೊಳ್ಳಬೇಕೆಂಬ ಆಸೆಯಿಂದ ತಮ್ಮ ಊರನ್ನೇ ಬಿಟ್ಟು ಕೆನಡಾಕ್ಕೆ ಬಂದಿಳಿದರು.

ಅಲ್ಲಿ ಅಲೆಕ್ ಕ್ರಮೇಣ ಚೇತರಿಸಿಕೊಂಡನು. ಕ್ಷಯರೋಗ ಅವನನ್ನು ಮರೆಯಿತು. ಕೆನಡಾದಲ್ಲಿ ಅವನ ಜೀವನ ಕ್ರಮವೇ ಬದಲಿಸಿ ಬಿಟ್ಟಿತು. ಪ್ರೊ|| ಬೆಲ್ ಒಮ್ಮೆ ತನ್ನ ಒಂದು ಭಾಷಣದ ಕಾರ್ಯಕ್ರಮಕ್ಕಾಗಿ ಬೋಸ್ಟನ್‌ಗೆ ಹೋಗಿದ್ದಾಗ, ಅಲ್ಲಿಯ ಕಿವುಡರ ಶಾಲೆಯಲ್ಲಿ ಕೆಲಸಕ್ಕೆ ಕರೆ ಬಂದಿತು. ತನಗೆ ಸಮಯವಿಲ್ಲವಾಗಿ, ತಂದೆ ಮಗ ಅಲೆಕ್‌ನನ್ನು ಈ ಕೆಲಸಕೆ ಒಪ್ಪಿಸಿದನು.

೧೮೭೧ ರಲ್ಲಿ ಅಲೆಗ್ಸಾಂಡರ್, ಗ್ರಹಾಂ ಬೆಲ್ (ಅಲೆಕ್) ಬೋಸ್ಟನ್ ನಿವಾಸಿಯಾಗಿ ಅಲ್ಲಿಯ ಶಾಲೆಯ ಮಾಸ್ತರಿಕೆಯನ್ನು ವಹಿಸಿಕೊಂಡನು. ಎರಡು ವರ್ಷಗಳನಂತರ ಅವನಿಗೆ ಅಲ್ಲಿಯ ಶ್ರೀಮಂತ ಕುಟುಂಬದ ಹುಡುಗಿ ಮಾಬಲ್ ಹಬ್ಬರ್ಡ್‌ಳ ಪರಿಚಯವಾಯಿತು.

ಮಾಬಲ್ ಹಬ್ಬರ್ಡ್ ನಾಲ್ಕು ವರ್ಷದ ಮಗುವಾಗಿದ್ದಾಗ ಕೆಂಜ್ವರ (Scarlet fever) ದಿಂದ ಮಲಗಿದಳು. ಅದಕ್ಕೆ ಮೊದಲು ಅವಳು ಬಹಳ ಚುರುಕಾದ ಹುಡುಗಿ. ಖಾಯಿಲೆಯ ನಂತರ ಮಂಕಾಗಿಬಿಟ್ಟಳು. ಭಯಂಕರ ಮೌನಿಯಾದಳು. 'ಇಂದು ಸರಿಯಾಗಬಹುದು,' 'ನಾಳೆ ಚೇತರಿಸಿಕೊಂಡಾಳು'

ಎಂಬ ನಿರೀಕ್ಷೆಯಿಂದ ವಾರಗಟ್ಟಳೆ ಅವಳ ತಂದೆ ತಾಯಿಗಳು ಸುಮ್ಮನಿದ್ದರು. ಕೊನೆಗೆ ಅವಳ ತಾಯಿ ಮಗಳಿಗೆ ಹಿಂದಿನ ಅವಳ ಆಟ ಪಾಟಗಳನ್ನು ಜ್ಞಾಪಿಸಲು ಪ್ರಯತ್ನಿಸಿದಳು. ಅವಳಿಗೆ ಅತಿ ಪ್ರೀತಿಯಾದ ನಿಕಟವಾಗಿದ್ದ ವಸ್ತುಗಳನ್ನು ತೋರಿಸಿದಳು. ಆದರೆ ಮಾಬಲ್ ಯಾವುದಕ್ಕೂ ಪ್ರತಿಕ್ರಿಯೆ ಯನ್ನು ತೋರಿಸಲಿಲ್ಲ. ಒಂದು ಶಬ್ದವನ್ನೂ ಆಡಲಿಲ್ಲ.

ಒಂದು ದಿನ ಅವಳ ತಾಯಿಗೆ ಒಳ್ಳೆಯ ಉಪಾಯ ಹೊಳೆ ಯಿತು. ಮಾಬಲ್ ಖಾಯಿಲೆ ಮಲಗುವ ಮೊದಲು ಅವಳನ್ನು ಬೋಸ್ಟನ್ ನಗರದ ಪ್ರದರ್ಶನಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಒಂದು ರಾಣಿಯಗೊಂಬೆ ಅವಳಿಗೆ ಬಹಳ ಪ್ರಿಯವಾಗಿತ್ತು. ಅದನ್ನು ಎತ್ತಿಮುದ್ದಾಡಿದ್ದಳು ಪುಟ್ಟ ಮಾಬಲ್. ಈಗ ಅವಳ ತಾಯಿ, ಅದರ ಚಿತ್ರವನ್ನು ಅವಳಿಗೆ ತೋರಿಸಿದಳು. ಎಷ್ಟೋ ದಿನಗಳಮೇಲೆ ಪುಟ್ಟ ಮಾಬಲ್ ಮುಗುಳ್ನಕ್ಕಳು. ಹುದುಗಿದ್ದ ಅವಳ ಧ್ವನಿ ಹೊರ ಬಂದಿತು–"ಪುಟ್ಟರಾಣಿ." ಹಿಂದಿನಂತೆಯೇ ಇಂದೂ ಅದನ್ನೆತ್ತಿ ಮುದ್ದಾಡಿದಳು. ಅಂದಿನಿಂದ ಅವಳು ಸ್ವಲ್ಪ ಸ್ವಲ್ಪವೇ ಚೇತರಿಸಿಕೊಂಡಳು.

ಒಂದು ದಿನ ಇದ್ದಕ್ಕಿದ್ದಂತೆಯೇ, "ಅಮ್ಮಾ ಏಕೆ ಹಕ್ಕಿಗಳು ಹಾಡುವುದೇ ಇಲ್ಲ? ಏಕೆ ನೀವಾರೂ ಮಾತನ್ನೇ ಆಡುವುದಿಲ್ಲ?" ಎಂದು ಮಗು ಕೇಳಿದಾಗ ತಂದೆ ತಾಯಿಗಳು ಮೂಕರಾದರು. ಅವರ ಹೃದಯ ಬಿರಿಯಿತು. ಆ ಜ್ವರ ಮಗುವನ್ನು ಪೂರ್ತಿ ಯಾಗಿ ಕಿವುಡುಮಾಡಿ ಹೋಗಿತ್ತು.

ಆದರೆ ಹುಟ್ಟು ಕಿವುಡರಿಗಿಂತ ಉತ್ತಮವಾದ ಒಂದಂಶವೆಂದರೆ, ಮಾಬಲ್‌ಗೆ ಮಾತನಾಡಲು ಬರುತ್ತಿತ್ತು. ಅವಳ ತಂದೆ ಗಾರ್ಡಿನರ್ ಗ್ರೀನ್ ಹಬ್ಬರ್ಡ್ ಶ್ರೀಮಂತ ಲಾಯರಾಗಿದ್ದನು.

ಅಲ್ಲಿನ ವಿದ್ಯಾಸಂಸ್ಥೆಯಲ್ಲಿ ವಿಶೇಷ ಆಸಕ್ತಿಯನ್ನು ಇಟ್ಟುಕೊಂಡಿದ್ದನು. ಮಗಳ ಮಾತು ನಿಲ್ಲದಿರಬೇಕಾದರೆ, ಉತ್ತಮಗೊಳ್ಳಬೇಕಾದರೆ, ಅವಳಿಗೆ ವಿಶೇಷ ಪಾಠದ ವ್ಯವಸ್ಥೆಯಾಗಬೇಕೆಂದು ಬೇಗನೇ ಮನಗಂಡ ಹಬ್ಬರ್ಡ್ ಒಬ್ಬ ಒಳ್ಳೆಯ ಶಿಕ್ಷಕನಿಗಾಗಿ ಹುಡುಕಾಡಿದನು. ೧೮೬೩ ರಲ್ಲಿ ಅಮೇರಿಕಾದಲ್ಲಿ, ತನ್ನ ಮಗಳಿಗೆ ಬೇಕಾದ ಯಾವ ಶಿಕ್ಷಕನೂ ದೊರೆಯಲಿಲ್ಲ.

ಯಾವ ಕಿವುಡರ ಶಾಲೆಗೆ ಹೋದರೂ, ಒಂದೇ ಉತ್ತರ ಬರುತ್ತಿತ್ತು: "ಕ್ರಮೇಣ ಅವಳು ಮೂಕಿಯಾಗಿಬಿಡುತ್ತಾಳೆ. ಕಿವುಡರಿಗೆ ಮಾತು ಬರುವುದು ಸಾಧ್ಯವಿಲ್ಲದ ವಿಷಯ." ಮತ್ತೆ ಕೆಲವರು "ಅವಳನ್ನು ಅನಾಥಾಲಯಕ್ಕೆ ಸೇರಿಸಬೇಕಾಗುತ್ತದೆ. ಅಕಸ್ಮಾತ್ತಾಗಿ ಅವಳು ಮಾತು ಕಲಿತರೂ ಕರ್ಕಶವಾದ ಧ್ವನಿ ಇರುತ್ತದೆ" ಎಂದು ಹೇಳಿ, ಹಬ್ಬರ್ಡ್‌ನನ್ನು ಭೂಮಿಗಿಳಿಸಿಬಿಟ್ಟರು.

ಒಮ್ಮೆ ಅವನಿಗೆ ಜರ್ಮನಿಯಲ್ಲಿನ ಶಾಲೆಯ ಸುದ್ದಿ ತಿಳಿಯಿತು. ಅಲ್ಲಿ ಕಿವುಡರು ಎದುರಿಗೆ ಮಾತನಾಡುವವರ ತುಟಿಯನ್ನು ಗಮನಿಸಿ, ಮಾತನ್ನು ಕಲಿಯುತ್ತಿದ್ದರು. ಅಮೇರಿಕಾದವರು ಇದನ್ನು ಬರಿಯ ಕಲ್ಪನೆ ಎಂದು ನಂಬಿದ್ದ ಕಾಲದಲ್ಲಿ ಹಬ್ಬರ್ಡ್ ಜರ್ಮನಿಯ ಈ ಪ್ರಯತ್ನಕ್ಕೆ ಕೈ ಹಾಕಿದನು. ಬೋಸ್ಟನ್‌ನ ಕುರುಡರ ಶಾಲೆಯಲ್ಲಿನ ಡಾ|| ಸ್ಯಾಮ್ಯುಯಲ್ ಗ್ರಿಡ್ಲಿ ಹೊವ್ ಈ ಜರ್ಮನ್ ಕ್ರಮವನ್ನು ನಂಬಿದ್ದರು. ಅದಕ್ಕಾಗಿ, ಹಬ್ಬರ್ಡ್ ಅವರನ್ನು ಕಾಣಲು ಆ ಶಾಲೆಗೆ ಹೋದನು. ಡಾ|| ಹೊವ್ ಯಾವುದನ್ನೂ 'ಅಸಾಧ್ಯ' ಎನ್ನುತ್ತಿರಲಿಲ್ಲ. ಎಲ್ಲರೂ 'ಅಸಾಧ್ಯ' ಎಂದರೆ, ಆ ಕ್ಷೇತ್ರದಲ್ಲಿ ಡಾ|| ಹೊವ್‌ರ ಪ್ರಯತ್ನ ಮಿಂಚಿನ

ವೇಗದಲ್ಲಿ ನಡೆಯುತ್ತಿತ್ತು. ಅವರು ಹಬ್ಬರ್ಡ್ "ನಿಮ್ಮ ಮಗಳ ಮಾತು ಉಳಿಯುತ್ತದೆ. ಆದರೆ ಅವಳ ಹತ್ತಿರ ನೀವು ಸುಮ್ಮನೆ ಮಾತನಾಡಬೇಕು. ಕೈ ಸನ್ನೆ ಮಾಡಲೇಕೂಡದು. ಅವಳು ಹಾಗೆ ಮಾಡಿದರೆ ನೀವು ಅರ್ಥವಾಗದವರಂತೆ ನಟಿಸಿ, ಅವಳ ಬಾಯಿಂದಲೇ ಮಾತು ಹೊರಡಿಸಬೇಕು. ನೀವು ಮಾತನಾಡುವಾಗ ಅವಳು ನಿಮ್ಮ ತುಟಿಗಳನ್ನೇ ನೋಡುತ್ತಿರಲಿ ಎಲ್ಲ ಮಾತುಗಳನ್ನೂ ಸ್ಪಷ್ಟವಾಗಿ ತುಟಿಯಲುಗಿಸಿ ಅವಳ ಮುಂದೆ ಆಡಿರಿ. ಇದು ಮೊದಮೊದಲು ಬಹಳ ನೋವುಂಟು ಮಾಡುತ್ತದೆ. ಆದರೆ ಫಲ ಖಂಡಿತ ಕೊಡುತ್ತದೆ" ಎಂದು ಖಂಡಿತವಾದ, ಗಂಭೀರವಾದ ಉಪದೇಶ ಕೊಟ್ಟರು

ಅವಳ ಮುಂದೆ ಹಾಲಿಟ್ಟು "ನನಗೆ ಹಾಲುಬೇಕು" ಎಂದು ಅವಳು ಹೇಳುವವರೆಗೆ ಅವಳಿಗೆ ಹಾಲು ಸಿಗದಂತೆ ಮಾಡುತ್ತಿದ್ದರು. ಗಾಡಿಯನ್ನು ನೋಡಿ ಅವಳು "ಸುತ್ತಾಡಲು ಹೋಗೋಣ" ಎನ್ನುವವರೆಗೆ ಅವರು ಗಾಡಿಯನ್ನು ಹತ್ತುತ್ತಿರಲಿಲ್ಲ. ಕ್ರಮೇಣ ಅವಳಿಗೆ ತಾನು ಮಾತನಾಡಲೇಬೇಕು ಎಂದರ್ಥವಾಯಿತು.

ಎರಡು ವರ್ಷಗಳ ಸತತವಾದ ಶಿಕ್ಷಣದ ನಂತರ, ಹಬ್ಬರ್ಡ್ ತನ್ನ ಮೂವರು ಮಕ್ಕಳಿಗೂ ಒಬ್ಬಳು ಗೌರ್ನೆಸ್ಸಳನ್ನು ಹುಡುಕಲಾರಂಭಿಸಿದ. ಆ ವೇಳೆಗೆ ಮಾಬಲ್ ವಾಕ್ಯಗಳನ್ನು ಪೂರ್ತಿ ಮಾಡಿ ಮಾತನಾಡಲು ಕಲಿತಿದ್ದಳು

ರಜ ಕಳೆಯಲೆಂದು, ಹಬ್ಬರ್ಡ್ ಮನೆಯವರು, ಮೈನೆ ಪಟ್ಟಣಕ್ಕೆ ಹೋಗಿದ್ದರು ಅವರಿಗೆ, ಅಲ್ಲಿಯ ಪುರೋಹಿತರ ಮಗಳು, ಮೇರಿ ಟ್ರೂಳ ಪರಿಚಯವಾಯಿತು. ಆಗತಾನೆ ತನ್ನ ಕಾಲೇಜು ಶಿಕ್ಷಣ ಮುಗಿಸಿದ್ದಳು. ಹಿಂದೆಲ್ಲಿಯೂ ಅವಳು

ಶಿಕ್ಷಕಿಯಾಗಿರಲಿಲ್ಲ. ಅವಳು ಈ ಪುಟ್ಟ ಮಕ್ಕಳಿಗೆ ಗೌರ್ನೆಸ್ ಆಗಲು ಒಪ್ಪಿದಳು. ಮಾಬಲ್‌ಳ ತುಂಟ ಕಣ್ಣುಗಳು, ಚುರುಕು ನಡತೆಯನ್ನು ನೋಡಿ ಅವಳ ಅಂತಃಸ್ಫೂರ್ತಿ, 'ಇವಳೇ ನಿನ್ನ ಯೋಗ್ಯತೆ ಸವಾಲು. ಇವಳಿಂದಲೇ ನಿನಗೆ ವಿಶೇಷ ಗೌರವ' ಎಂದು ನುಡಿಯಿತು.

ಮಾಬಲ್ ಮುಂದೆ ತನ್ನ ಗೌರ್ನೆಸ್‌ಳ ಬಗ್ಗೆ ಹೇಳುತ್ತಾ "ಮೇರಿ ಟ್ರೂ ಮೂರು ವರ್ಷ ನನಗೆ ಗುರುವಾಗಿದ್ದಳು. ಆದರೆ ಎಂದೆಂದಿಗೂ ನನ್ನ ಗೆಳತಿಯಾಗುಳಿದಳು" ಎಂದಿದ್ದಾಳೆ,

ಅವಳ ವಿದ್ಯಾಭ್ಯಾಸ ಒಂದು ಹೊಸ ಅಧ್ಯಾಯವನ್ನೇ ತೆರೆಯಿತು. ಇದರಿಂದ ಒಂದು ಹೊಸ ವಿಚಾರ ಕ್ರಾಂತಿಯೇ ಆರಂಭವಾಯಿತು.

ತನ ಮೂವರು ಮಕ್ಕಳೂ ಒಟ್ಟಿಗೆ ಕಲಿಯಬೇಕೆಂಬ ತಾಯಿಯ ಆಶಯದ ಮೇರೆಗೆ, ಎಂಟು ವರ್ಷದ ಮಾಬಲ್, ತಂಗಿಯರೊಡನೆ ಪಾಠಕ್ಕೆ ಕೂರುತ್ತಿದ್ದಳು. "ಕೈಸನ್ನೆ ಮಾಡಬೇಡ. ನೀನು ಮಾತನಾಡು ಮಾಬಲ್ ನಿನ್ನ ತುಟಿಯನ್ನು ಗಮನಿಸಲಿ" ಇಷ್ಟೇ ಶ್ರೀಮತಿ ಹಬ್ಬರ್ಡ್ ಮೇರಿ ಟ್ರೂಗೆ ಕೊಟ್ಟ ಆದೇಶ.

ಎಲ್ಲ ಇಂದ್ರಿಯಗಳೂ ನೇರವಾಗಿರುವ ಮಕ್ಕಳು ತಾವಾಗಿಯೇ ಸ್ವಾಭಾವಿಕವಾಗಿ ತಿಳಿದುಕೊಳ್ಳುವಂತಹ ವಿಷಯಗಳು ಕಿವುಡ ಮಗುವಿಗೆ ಇನ್ನೊಬ್ಬರು ತಿಳಿಸಬೇಕಾದಂತಹ ಅಚ್ಚರಿಯ ವಿಷಯಗಳಾಗಿರುತ್ತಿದ್ದುದನ್ನು ಗಮನಿಸಿದ ಮೇರಿ ಟ್ರೂ ದಿಗ್ಭ್ರಾಂತಳಾದಳು. ಎಲ್ಲರೊಡನೆ ನಡೆಯುವ ಪಾಠ ಮಾಬಲ್‌ಗೆ ಅರ್ಥಶೂನ್ಯವಾದುವು. ಇದನ್ನರಿತ ಮೇರಿ ಅವಳಿಗಾಗಿ ಹೆಚ್ಚು ಸಮಯ ಮೀಸಲಿಟ್ಟಳು. ಹೊಸಮಾದರಿಯಲ್ಲಿ ಕೊನೆ ಇಲ್ಲದ

ಕಥೆಗಳನ್ನು ಹೆಣೆದು ಹೇಳಿದಳು. ಹೊಸವಾದರಿಯ ಆಟ ಗಳನ್ನು ಹೇಳಿಕೊಟ್ಟಳು. ಕೇಂಬ್ರಿಜ್‌ನ ಸುತ್ತಲೂ ಅವಳನ್ನು ಸುತ್ತಾಡಿಸಿದಳು. ಕುದುರೆ ಗಾಡಿಯಲ್ಲಿ ಬೋಸ್ಟನ್ ನಗರಕ್ಕೆ ಕರೆದೊಯ್ದಳು. ಅಲ್ಲಿ ಅವರು ಅಂಗಡಿಗಳಿಗೆ ಬೇರೆ ಬೇರೆ ಸ್ಥಳ ಗಳಿಗೆ ಭೇಟಿ ಇತ್ತರು. ಮೇರಿ, ಬೋಸ್ಟನ್ ಮತ್ತು ಕೇಂಬ್ರಿಜ್‌ನ ನಕ್ಷೆಯನ್ನು ತೋರಿಸುತ್ತಾ, ತಾವು ಎಲ್ಲೆಲ್ಲಿಗೆ ಹೋಗಿದ್ದೆವು, ಹೇಗೆ ಹೋದೆವು ಎಂದು ವಿವರಿಸಿದಳು. ಹೀಗೆಯೇ ಕ್ರಮೇಣ ಮಾಬಲ್‌ಳ ಪದ ಸಂಪತ್ತನ್ನೂ ಅನು ಭವವನ್ನೂ ಬೆಳೆಸಿದಳು.

ಇಷ್ಟರ ಜೊತೆಗೆ ಅವಳಿಗೆ ತಂಗಿಯರೊಡನೆ ಕ್ರಮವಾದ ಪಾಠ ಪ್ರವಚನಗಳೂ ನಡೆಯುತ್ತಿದ್ದುವು.

ಕ್ರಮೇಣ ಮಾಬಲ್‌ಗೆ ಶಿಕ್ಷಣವೂ, ಶಿಕ್ಷಣಕ್ರಮವೂ ರೂಢಿ ಯಾಯಿತು. ಮಾತನಾಡುವವರ ತುಟಿಗಳನ್ನು 'ಓದು'ವುದರಲ್ಲಿ ಪ್ರವೀಣಳಾದಳು. ಅವರ ನಿತ್ಯದ ಪಾಠ ಪ್ರಾರ್ಥನೆಯಿಂದ ಆರಂಭವಾಗುತ್ತಿತ್ತು ಪ್ರಾರ್ಥನೆಯನ್ನೂ, ಪದ್ಯಗಳನ್ನೂ ಮೇರಿ ಟ್ರೂ ಪುಟ್ಟವರಿಬ್ಬರಿಗೂ ಹಲಗೆಯ ಮೇಲೆ ಬರೆದು ಕೊಟ್ಟು, ನಂತರ ಹೇಳಿಸುತ್ತಿದ್ದಳು. ಮಾಬಲ್ ಅವರ ಹಲಗೆಯ ಮೇಲಿನ ಪದಗಳನ್ನೂ, ಅವರು ಓದುವಾಗ ಅವರ ತುಟಿಗಳನ್ನೂ ಗಮನಿಸಿ, ಕ್ರಮೇಣ ತಾನೂ ಅವರ ಜೊತೆಯಲ್ಲಿ ದನಿಗೂಡಿಸಿದಳು.

ಅವಳ ಈ ಓದುವ ಸಾಮರ್ಥ್ಯದ ಅರಿವಾದ ಕೂಡಲೇ ಮೇರಿ ಶಿಕ್ಷಣ ಕ್ರಮವನು ಸ್ವಲ್ಪಮಟ್ಟಿಗೆ ಬದಲಾಯಿಸಿದಳು. ಈಗ ಅವಳ ವಿದ್ಯಾಭ್ಯಾಸ ಭರದಿಂದ ಮುಂದುವರಿಯಿತು. ಓದು ಅವಳನು ಹೊಸ ಪ್ರಪಂಚಕ್ಕೇ ಒಯ್ದಿತು. ರಾತ್ರಿ ಎಂಟೂವರೆ

ಗೆಲ್ಲಾ ಮಲಗಬೇಕಾಗಿದ್ದ ಮಾಬಲ್ "ಅಮ್ಮ ತಾಳಮ್ಮ, ಇನ್ನು ಸ್ವಲ್ಪ ಓದುತ್ತೇನೆ, ಇದೇಕೊನೆ" ಎನ್ನುತ್ತಾ ಓದನ್ನು ಸಾಗಿಸುತ್ತಿದ್ದಳು.

ಮೇರಿಟೂ ತನಗಿಷ್ಟವಾಗಿದ್ದ ಚರಿತ್ರೆಯನ್ನು ಶಿಷ್ಯಳಿಗೂ ಓದಿಸಿದಳು. ಅವಳಿಗೆ ಅಮೇರಿಕಾದ ಚರಿತ್ರೆ, ಅದರ ಕ್ರಾಂತಿಯ ಇತಿಹಾಸ ಕರಗತವಾಯಿತು.

ಒಮ್ಮೆ ಹಬ್ಬರ್ಡ್ ಅತಿಥಿಯೊಬ್ಬರನ್ನು ಮನೆಗೆ ಕರೆತಂದು ತನ್ನ ಮಕ್ಕಳ ಪರಿಚಯ ಮಾಡಿಕೊಡುತ್ತಾ "ಇವಳು ನನ್ನ ಮಗಳು ಮಾಬಲ್" ಎಂದು ಹೇಳಿ, "ನೋಡಮ್ಮಾ ಇವರು ಸರ್ ವಿಲಿಯಂ ಫೇರ್‌ಫಾಕ್ಸ್, ಇಂಗ್ಲೆಂಡಿನಿಂದ ಬಂದಿದ್ದಾರೆ' ಎಂದು ಮಗಳಿಗೆ ಅತಿಥಿಯ ಪರಿಚಯ ಮಾಡಿಕೊಟ್ಟನು. ಎಂದಿನಂತೆ ವಿನಯದಿಂದ ನಮಸ್ಕರಿಸುತ್ತಾ "ನಾನು ಪುಸ್ತಕದಲ್ಲಿ ಇಂಗ್ಲೆಂಡ್ ಬಗ್ಗೆ ಓದಿದ್ದೇನೆ" ಎಂದಳು ಮಾಬಲ್ "ಏನು ಓದಿದ್ದೀಯಾ?" ಎಂದವರು ಕೇಳಿದಾಗ, "ನಾವು ನಿಮ್ಮನ್ನು ಯುದ್ಧದಲ್ಲಿ ಸೋಲಿಸಿದೆವು" ಎಂದು ಜಂಭದಿಂದ ನುಡಿದಳು.

'ಅತಿಥಿಗಳಿಗೆ ಅಪಮಾನವಾಗುವಷ್ಟರ ಮಟ್ಟಿಗೆ ಅವಳನ್ನು ದೇಶಪ್ರೇಮಿಯನ್ನಾಗಿ' ಮಾಡಿದ್ದಕ್ಕೆ ಹಬ್ಬರ್ಡ್ ಮೇರಿಯನ್ನು ದೂರಿದಾಗ ಅವಳು ನಕ್ಕು "ಅವಳ ವಯಸ್ಸಿನ ಇತರ ಮಕ್ಕಳಿಗಿಂತ ಅವಳಿಗೆ ಚರಿತ್ರೆ ಹೆಚ್ಚು ತಿಳಿದಿದೆ" ಎಂದು ಶಿಷ್ಯೆಯ ಬಗ್ಗೆ ಅಭಿಮಾನದಿಂದ ನುಡಿದಳು.

ಈಗ ಹಬ್ಬರ್ಡ್‌ಗೆ, ಮಗಳನ್ನು ಪರೀಕ್ಷೆಗೆ ಕೂರಿಸಬೇಕೆಂಬ ಮನಸ್ಸಾಯಿತು. ಕೆಲವೇ ದಿನಗಳಲ್ಲಿ ಮಾಬಲ್‌ಳಿಗೆ ಮನೆಯಲ್ಲೇ ಪರೀಕ್ಷೆ ನಡೆಯಿತು. ಪರೀಕ್ಷಕರು ಮಾಬಲ್‌ಗೆ ಕೊಟ್ಟ ಪ್ರಶಸ್ತಿ

ಪತ್ರ ಮೇರಿಗೂ ಹಬ್ಬರ್ಡ್‌ಗೂ ಬಹಳ ಅಭಿಮಾನದ ಸಂಗತಿಯಾಯಿತು.

"ಈ ಒಂಭತ್ತುವರ್ಷದ ಮಾಬಲ್ ಅವಳ ವಯಸ್ಸಿನವರನ್ನು ಮೀರಿ ನಿಂತಿದ್ದಾಳೆ. ನಾನು ಮೊದಲು ಅವಳನ್ನು ಮಾತನಾಡಿಸಿಲ್ಲದಿದ್ದರೂ, ನನ್ನ ಬಾಯಿಯ ಓಟವನ್ನು ಎಷ್ಟು ಸುಲಭವಾಗಿ ತಿಳಿದುಕೊಂಡಳೆಂದರೆ,ಅದು ನಿಜವಾಗಿಯೂ ಅಚ್ಚರಿ ಪಡುವಂತಹ ವಿಚಾರವೇ .... !"

ಆಗಿನ ಕಾಲದಲ್ಲಿ ಕಿವುಡ ಮೂಕ ಮಕ್ಕಳಿಗೆ ಮಸ್ಸಾಚುಸೆಟ್ಸ್‌ನಲ್ಲಿ ಯಾವ ಅವಕಾಶವೂ ಇರಲಿಲ್ಲ. ಹತ್ತುವರ್ಷ ಆಗುತ್ತಿರುವ ಹಾಗೆ ಅವರನ್ನು ಅನಾಥಾಲಯಕ್ಕೆ ಸೇರಿಸಬೇಕಲ್ಲದೇ, ಅನ್ಯಮಾರ್ಗವಿರಲಿಲ್ಲ. ಅನಂತರದಲ್ಲಿ, ಗಾರ್ಡಿನರ್ ಹಬ್ಬರ್ಡ್‌ನ ವಿಶೇಷ ಪ್ರಭಾವದಿಂದಾಗಿ, ಅಂತಹವರ ವಿದ್ಯಾಭ್ಯಾಸದ ಕ್ರಮವನ್ನು ಉತ್ತಮ ಪಡಿಸುವುದಕ್ಕಾಗಿ ಸಮಿತಿಯೊಂದು ಏರ್ಪಟ್ಟಿತು. ಆಗಾಗ್ಗೆ ಸಮಿತಿಯ ಸದಸ್ಯರು ಅಧಿಕೃತವಾಗಿ ಸಂಧಿಸಿ ಈ ಸಮಸ್ಯೆಯನ್ನು ಚರ್ಚಿಸುತ್ತಿದ್ದರು. ಒಮ್ಮೆ ಅಂತಹ ಸಂದರ್ಭದಲ್ಲಿ ಗಾರ್ಡಿನರ್ ಹಬ್ಬರ್ಡ್, "ಕಿವುಡರಿಗೆ ಮಾತನಾಡುವವರ ತುಟಿಯನ್ನು 'ಓದ'ಲು ಕಲಿಸಬೇಕು ಎಂದು ಸಲಹೆ ಮಾಡಿದನು. ಇತರ ಸದಸ್ಯರು ಸಲಹೆಯನ್ನು ತೀವ್ರವಾಗಿ ವಿರೋಧಿಸಿದರು. ಸ್ವತಃ ಲಾಯರಾದ ಹಬ್ಬರ್ಡ್ ಸಾಕ್ಷಿಗಳನ್ನು ಒದಗಿಸಲು ಮನಸ್ಸುಮಾಡಿ ಮೇರಿ ಟ್ರೂ, ಹಾಗೂ ಮಾಬಲ್‌ರನ್ನು ಕರೆಸಿದನು. ಮೇರಿ ತನ್ನ ಪ್ರಯೋಗಗಳನ್ನೂ, ಅವುಗಳ ಫಲವನ್ನೂ ಸಾರವತ್ತಾಗಿ ವಿವರಿಸಿದಳು. ಆದರೆ ಹಳಬರು ಈ ಹೊಸವಿಧಾನವನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದು ಸಾಧ್ಯವೆ? ಎರಡೂ ಪಕ್ಷದವರಿಗೂ ಚರ್ಚೆ ಬಿಸಿ

ಏರಿತು. ಮಧ್ಯದಲ್ಲಿ ಅನಾಥಾಲಯದ ಅಧಿಕಾರಿಯೊಬ್ಬನು ಬಂದು ಈ ವಿಧಾನವನ್ನು ತಳ್ಳಿ ಹಾಕಿಬಿಟ್ಟನು. "ಕಿವುಡರಿಗೆ ಮಾತು ಕಲಿಸುವ ಪ್ರಯತ್ನವೇ ವ್ಯರ್ಥ. ಶ್ರೀ ಹಬ್ಬರ್ಡ್‌ರ ತತ್ವವೆಲ್ಲಾ ಅನುಭವವಿಲ್ಲದ್ದು" ಎಂದು ಕೂಗಾಡಿದನು. ಇನ್ನೊಬ್ಬ ಅಧಿಕಾರಿ "ಕಿವುಡರು ಬಹುಃಶಃ ಕೆಲವು ಮಾತುಗಳ ನ್ನಾಡಬಹುದು. ಆದರೆ ಆ ಮಗುವಿನ ಬುದ್ಧಿ ಎಂದೆಂದೂ ಕರಾಳ ಕೂಪದಲ್ಲಿಯೇ ಇರುವುದು" ಎಂದು ತನ್ನ ಮಾತಿಗೆ ತಾನೇ ತೃಪ್ತಿಪಟ್ಟುಕೊಳ್ಳುತ್ತಾ ಸಭೆಯಲ್ಲಿ ನಿರುತ್ಸಾಹವನ್ನು ಚೆಲ್ಲಿ ಕುಳಿತನು.

ಅಧ್ಯಕ್ಷರೆದ್ದು ಹಬ್ಬರ್ಡ್‌ರನ್ನು, ಅವರ ಅಭಿಪ್ರಾಯಕ್ಕಾಗಿ ಕೇಳಿದಾಗ, "ನಾನು ಖಂಡಿತವಾಗಿಯೂ ಅವರ ವಾದವನ್ನು ವಿರೋಧಿಸುತ್ತೇನೆ. ಸಮಿತಿಯು ಬೇಕಾದರೆ ನನ್ನ ಮಗಳನ್ನೇ ಪರೀಕ್ಷಿಸಲಿ" ಎಂದು ಹೇಳಿ, ಮೇರಿಗೆ, ಮಾಬಲ್‌ಳನ್ನು ಕರೆ ತರುವಂತೆ ಸಂಜ್ಞೆ ಮಾಡಿದನು. ಮಾಬಲ್ ಅವಳಿಗೆ ಮೀಸ ಲಿಟ್ಟ ಕುರ್ಚಿಯಲ್ಲಿ ಬಂದು ಕುಳಿತಳು. ಅವಳ ಚುರುಕುನಡಿಗೆ ಯನ್ನು ನೋಡುತ್ತಾ ಸದಸ್ಯರು ಸ್ತಬ್ಧರಾಗಿ ಕುಳಿತರು ಅವಳ ನಕ್ಷತ್ರದಂತಹ ಕಣ್ಣುಗಳು ಒಡತಿಯ ಆತ್ಮವಿಶ್ವಾಸವನ್ನು ಸಾರುತ್ತಿದ್ದುವು. ಹೊಸಬರ ಮಧ್ಯದಲ್ಲಿ ಸ್ವಲ್ಪವೂ ಸಂಕೋಚ ವಿಲ್ಲದೇ ಕುಳಿತ ಮಾಬಲ್‌ಳನ್ನು ನೋಡಿ "ಇವಳು ಕಿವು ಡಿಯೇ!" ಎಂದು ಎಲ್ಲರಿಗೂ ಅನಿಸಿತು. ಸಮಸ್ಯೆಯ ಬಗ್ಗೆ ಚರ್ಚೆಮಾಡಬಹುದು. ಆದರೆ ಸಮಸ್ಯೆಯನ್ನು ನೇರವಾಗಿ ಎದುರಿಸಿ ನಿಂತಿರುವ ಒಂದು ಮಗು ಎದುರಿಗೇ ಬಂದಾಗ........?

ಕೊನೆಗೆ ಸದಸ್ಯರೊಬ್ಬರು ಸಾವರಿಸಿಕೊಂಡು ಪ್ರಶ್ನೆಗಳನ್ನು

ಕೇಳಿದರು. ನಿನ್ನ ಹೆಸರೇನು ? ನೀನೇನು ಓದಿರುವೆ ? ನಿನಗೆ ಅಕ್ಕತಂಗಿಯರೆಷ್ಟು ?.... ಮುಂತಾದ ಪ್ರಶ್ನೆಗಳಿಗೆ ಮಾಬಲ್ ತಡಬಡಿಸದೆ ಉತ್ತರ ಕೊಟ್ಟಳು. ಅವಳ ಧ್ವನಿ ಸುಶ್ರಾವ್ಯ ವಾಗಿಲ್ಲದಿದ್ದರೂ, ಕರ್ಕಶವಾಗಿರಲಿಲ್ಲ.

ಅವರ ಆಶ್ಚರ್ಯ ಪರಂಪರೆಗಳ ಮೊದಲನೆಯ ಅಧ್ಯಾಯ ಮುಗಿಯುತ್ತಿದ್ದ ಹಾಗೆಯೇ ಮತ್ತೆಕೆಲವರು ಅವಳನ್ನು ಚರಿತ್ರೆ, ಭೂಗೋಳಗಳ ಮೇಲೆ ಪ್ರಶ್ನಿಸಿದರು ಪುಟ್ಟ ಪುಟ್ಟ ಲೆಕ್ಕ ಕೇಳಿದರು. ಎಲ್ಲ ಪ್ರಶ್ನೆಗಳಿಗೂ ತಕ್ಷಣವೇ ಮಾಬಲ್‌ಳ ಉತ್ತರ ಸಿದ್ಧವಾಗುತ್ತಿತ್ತು. "ಅವಳ ಬುದ್ಧಿ ಕರಾಳ ಕೂಪದಲ್ಲಿಲ್ಲ" ಎಂದು ಸದಸ್ಯನೊಬ್ಬ ತನ್ನಲ್ಲೇ ಗೊಣಗಿಕೊಂಡನು. "ಓದಲು ಬರುತ್ತದೆಯೇ" ಪ್ರಶ್ನೆ ಕೇಳುತ್ತಿರುವ ಹಾಗೆ, ಮೇರಿ ಅವಳಿಗೆ ಪುಸ್ತಕ ಒಂದನ್ನು ಕೊಟ್ಟಳು. ಮಾಬಲ್ ಅದನ್ನು ಪಟ ಪಟನೆ ಓದಿದಾಗ ಇಡೀ ಕೊಠಡಿ ಗಂಭೀರವಾಯಿತು. ಆಶ್ಚರ್ಯದ ಅಲೆ ಯೊಂದು ಅಲ್ಲಿದ್ದವರನ್ನು ಮೂಕರನ್ನಾಗಿ ಮಾಡಿತು.

"ಕಿವುಡರಿಗೆ ಅಲ್ಲಾಡುವ ತುಟಿಯನ್ನು 'ಓದಲು' ಕಲಿಸ ಬೇಕು" ಎಂದು ಕಾನೂನು ಮಾಡಿಕೊಂಡು ಆ ಶಾಸಕರ ಸಭೆ ಮುಕ್ತಾಯವಾಯಿತು.

ಮನೆಗೆ ಹಿಂತಿರುವಾಗ ಏಕೋ ಮಾಬಲ್ ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಮೌನಿಯಾಗಿದ್ದಳು. ಪರೀಕ್ಷೆಯ ಕಾಲದಲ್ಲಿ, ಒಬ್ಬರು ಅವಳನ್ನು "ನೀನು ನಿಜವಾಗಿ ಕಿವುಡಿಯೇ ?" ಎಂದು ಕೇಳಿದ್ದರು. ಉತ್ತರಿಸಲು ತಿಳಿಯದೆ ಅವಳು ತಂದೆಯ ಮುಖನೋಡಿದಾಗ ಅವನು ಹೌದೆಂದು ತಲೆಯಾಡಿಸಿದ್ದನು. ಈ ಪ್ರಶ್ನೆ ಅವಳ ತಲೆಯನ್ನು ಕೊರೆಯುತ್ತಿತ್ತು. "ಮಿಸ್, ಕಿವುಡಿ ಎಂದರೇನು ?" ದಾರಿಯಲ್ಲಿ ಮೇರಿಗೆ ಶಿಷ್ಯಳ ಮುರ್ಮ

ಭೇದಕ ಪ್ರಶ್ನೆಕಾದಿತ್ತು. ಅವಳ ಮುಖಕ್ಕೆ ಮುಖವಿಟ್ಟು, ಮೇರಿ, ಅವಳ ಆತಂಕ ತುಂಬಿದ ಕಣ್ಣುಗಳನ್ನೇ ನೋಡುತ್ತಾ 'ಹಾಗೆಂದರೇ ನೆಂದು,' ಆದಷ್ಟು ಹಗುರವಾಗಿ ವಿವರಿಸಿದಳು. ಅದುವರೆಗೆ ಮಾಬಲ್ ತಾನು ಎಲ್ಲರಿಗಿಂತ 'ಬೇರೆ' ಎಂದೇ ತಿಳಿದಿರಲಿಲ್ಲ. ಎಲ್ಲರೊಡನೆ ಕಲೆತು ಆಡಲು, ಓದಲು ಕಲಿಯಬೇಕೆಂಬ ತಂದೆ ತಾಯಿಯರ ಪ್ರಯತ್ನದಿಂದಾಗಿ, ಅವಳಿಗೆ ತನ್ನ ಕೊರತೆಯ ಅರಿವೇ ಆಗಿರಲಿಲ್ಲ.

ಕೆಲವು ಕಾಲಾನಂತರ, ಮೇರಿ ಟ್ರೂ ಹಬ್ಬರ್ಡ್‌ರ ಮನೆಯನ್ನು ಬಿಟ್ಟು ಬೋಸ್ಟನ್ನಿನ ಕಿವುಡರ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿದಳು. ಇದರಿಂದ ಮಾಬಲ್ ತಂಗಿಯ ಜೊತೆಯಲ್ಲಿ ಖಾಸಗಿ ಶಾಲೆಯೊಂದನ್ನು ಸೇರಿದಳು. ಆದರೆ ಅವಳ ತಂದೆ ತಾಯಿಯರಿಗೆ, ಅವಳ ಧ್ವನಿಯನ್ನು ಸುಧಾರಿಸಬೇಕು, ಅವಳ ಮಾತನ್ನು ಸ್ಪಷ್ಟಗೊಳಿಸಬೇಕು ಎಂಬ ಆಸೆ ಇತ್ತು. ಅವಳಿಗೆ ಹನ್ನೆರಡು ವರ್ಷವಾದಾಗ ತಾಯಿ ಮಗಳೊಡನೆ ಜರ್ಮನಿಗೆ ಹೊರಟಳು. ಅವಳನ್ನು ಅಲ್ಲಿಯ ಶಾಲೆಗಳಿಗೆ ಕರೆದುಕೊಂಡು ಹೋದಳು. ಆಗಲೇ ತಾಯಿಗೆ ಮಗಳ ವಿದ್ಯಾಭ್ಯಾಸದ ಮಟ್ಟ ಎಷ್ಟು ಮುಂದಿದೆ ಎಂದು ತಿಳಿದದ್ದು. ಅಲ್ಲಿಯ ಮುಖ್ಯಾಧಿಕಾರಿಗಳು ನಂಬಲಾರದಷ್ಟು ಅವಳು ಕಲಿತಿದ್ದಳು. ಒಬ್ಬ ಅಧಿಕಾರಿಯಂತೂ, ಅವಳು ಕಿವುಡಿಯಲ್ಲ ಎಂದೇ ಸಾಧಿಸಲು ಪ್ರಯತ್ನಿಸಿದನು. ಅದನ್ನು ಸ್ಪಷ್ಟ ಪಡಿಸಲೆಂಬಂತೆ, ಅವಳನ್ನು ಮಹಡಿಯ ಮೇಲೆ ನಿಲ್ಲಿಸಿ, ಅವಳ ಹಿಂಬದಿಯಿಂದ ಕೆಳಗೆ ನಿಂತು, ಜೋರಾಗಿ ಕರೆದನು. ಮಾಬಲ್ ಯಾವ ಪ್ರತಿಕ್ರಿಯೆಯನ್ನು ತೋರಿಸದಿರಲು, ಅವನು ಸತ್ಯಾಂಶವನ್ನು ನಂಬಲೇಬೇಕಾಯಿತು. "ಅವಳು ಕಿವುಡಿ ನಿಜ. ಆದರೆ ನಾವೇನೂ ಅವಳಿಗಾಗಿ ಮಾಡ

ಲಾರೆವು. ಜರ್ಮನಿಯ ಯಾವ ಕಿವುಡರ ಶಾಲೆಯೂ ಅಷ್ಟು ಸುಧಾರಿಸಿಲ್ಲ ” ಎಂದನು.

ಇದರಿಂದಾಗಿ ಮಾಬಲ್ ಅಲ್ಲಿಯ ಸಾಮಾನ್ಯರ ಶಾಲೆಗೆ ಸೇರಿದಳು. ಅಲ್ಲಿ ಯಾರಿಗೂ ಇಂಗ್ಲಿಷ್ ಬರುತ್ತಿರಲಿಲ್ಲ. ಕೆಲವೇ ವಾರಗಳಲ್ಲಿ ಅವಳು ಜರ್ಮನ್ ಭಾಷೆಯನ್ನು ಕಲಿತು ತಾಯಿಗೆ 'ದುಭಾಷಿ'ಯೂ ಆದಳು. ಅಲ್ಲಿ ಮೂರು ವರ್ಷ ಅವಳ ವಿದ್ಯಾಭ್ಯಾಸ ಸಾಗಿತು. ಅಷ್ಟರಲ್ಲಿ, ಬೋಸ್ಟನ್‌ನಿಂದ “ ಮನೆಗೆ ಮರಳಬೇಕೆಂದು ” ಕರೆ ಬಂದಿತು. ಅಲ್ಲಿ ತರುಣ ಶಿಕ್ಷಕನೊಬ್ಬ ವಾಕ್‌ದರ್ಶನದಿಂದ, ಕಿವುಡರಿಗೆ ಹೊಸ ಬಗೆಯಲ್ಲಿ ಮಾತು ಕಲಿಸಿ, ಅವರ ಧ್ವನಿಯನ್ನು ಸುಧಾರಿಸುವ ಬಗ್ಗೆ ಮಾತನಾಡಿದ್ದನು. ಅವನ ಜೊತೆಯಲ್ಲಿ ಕೆಲಸ ಮಾಡಲಾರಂಭಿಸಿದ್ದ ಮೇರಿಗೆ, ಅವನ ಈ ಹೊಸಕ್ರಮದ ಬಗ್ಗೆಯೂ, ವಿಶೇಷವಾದ ಅಭಿಮಾನ ಮೂಡಿದ್ದಿತು.

ಮಾಬಲ್ ಜರ್ಮನಿಯಿಂದ ಬರುತ್ತಿದ್ದಂತೆಯೇ ಮೇರಿ ಈ ಹೊಸಬನ ಹೊಸಕ್ರಮದ ಬಗ್ಗೆ ತಡೆಯಿಲ್ಲದ ವರದಿಯೊಪ್ಪಿಸಿದಳು. “ ಮಾಬಲ್, ಇಡೀ ದೇಶವೇ ಅವನನ್ನು ಪ್ರಶಂಸಿಸುತ್ತಿದೆ. ಈ ಮನುಷ್ಯ ಕಳೆದ ವರ್ಷ ತಾನೆ ಕೆನಡಾದಿಂದ ಬೋಸ್ಟನ್ನಿಗೆ ಬಂದಿದ್ದಾನೆ. ಇವನು ಸ್ಕಾಟ್ಲೆಂಡಿಗೆ ಸೇರಿದವನು. ಈ 'ವಾಕ್‌ದರ್ಶನ' ಕ್ರಮವನ್ನು ಅವನ ತಂದೆ ಕಂಡುಹಿಡಿದಿದ್ದಂತೆ. ಅವನು ಎಲ್ಲ ಧ್ವನಿಯನ್ನು ಫಲಕದ ಮೇಲೆ ಬರೆಯುತ್ತಾನೆ. ಅದನ್ನು ಓದುವ ಯಾರಾದರೂ ಅದೇ ಧ್ವನಿಯನ್ನು ಪುನರುಚ್ಚರಿಸುತ್ತಾರೆ............” ಆದರೆ ಮಾಬಲ್‌ಳ ಅಪನಂಬಿಕೆಯ ಭಾವನೆ ಅವಳ ಉತ್ಸಾಹವನ್ನು ಭೂಮಿಗಿಳಿಸಿಬಿಟ್ಟಿತು. “ಓ—

ನಿರಾಶಾವಾದಿಯಂತೆ ಆಡಬೇಡ. ಇಬ್ಬರು ಕಿವುಡ ಹುಡುಗರಿಗೆ ಮಾತು ಕಲಿಸಿದ್ದಾನೆ. ನಾನೇ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ತನಗೆ ಬೇಕಾದ್ದನ್ನು ಮಕ್ಕಳ ಹತ್ತಿರ ಕೂಡ ಮಾಡಿಸಿಕೊಳ್ಳು ತ್ತಾನೆ. ಅಷ್ಟು ದಕ್ಷನವನು" ಎಂದು ಮೇರಿ ಮುಂದುವರಿಸಿ ದಾಗ, ಅವಳಿಗಾಗಿ ಮಾಬಲ್ ನಂಬಿದಳು. "ಸರಿ ಹಾಗಾದರೆ ನಾನೂ ಅವನ ಹತ್ತಿರ ಕೆಲವುದಿನ ಪಾಠ ಕಲಿಯುತ್ತೇನೆ" ಎಂದು ಒಪ್ಪಿಕೊಂಡು ಆ ತರುಣ ಪ್ರೊ|| ಅಲೆಗ್ಸಾಂಡರ್ ಗ್ರಹಾಂ ಬೆಲ್‌ನ, ಶಾಲೆಗೆ ಸೇರಿದಳು.

ಅಲ್ಲಿ ಮಾಬಲ್‌ಗೆ ತನ್ನ ಗುರುವಿನ ಬಗ್ಗೆ ಅಂತಹ ಘನವಾದ ಅಭಿಪ್ರಾಯವೇನೂ ಮೂಡಲಿಲ್ಲ. ಅಲ್ಲಿಂದಿಲ್ಲಿಗೆ ಓಡಿಯಾಡುತ್ತಾ ಕಪ್ಪುಹಲಗೆಯ ಮೇಲೆ ಎಲ್ಲರಹಡ ಧ್ವನಿಯನ್ನೂ ಸರಸರನೆ ರೇಖೆಗಳ ಮೂಲಕ ಚಿತ್ರಿಸುತ್ತಿರುವಾಗ, ಆಯಾ ಧ್ವನಿಗೆ ನಾಲ ಗೆಯ ಸ್ಥಾನವನ್ನು ತೋರಿಸಿ ಕೊಡುತ್ತಿದ್ದಾಗ, ಸಹಜವಾಗಿಯೇ ಮಾಬಲ್‌ಳ ಗಮನ ಈ ಮಾಸ್ತರನ ಕಡೆಗೆ ಹರಿಯಿತು.

ತೆಳುವಾಗಿ ಎತ್ತರವಾಗಿದ್ದ ಅವನ ವಯಸ್ಸು ಸುಮಾರು ನಲ್ವತ್ತು ಇರಬಹುದು ಎಂದು ಅವಳು ಅಂದಾಜು ಮಾಡಿ ಕೊಂಡಳು. ಆಗ ಅವನ ವಯಸ್ಸು ಕೇವಲ ಇಪ್ಪತ್ತಾರು ವರ್ಷ ಗಳು. ಖಾಯಿಲೆಯಿಂದಾಗಿ ವಯಸ್ಸಾದವನಂತೆ ಕಾಣುತ್ತಿದ್ದನು. ನಾಜೂಕು ಉಡುಗೆಯವರನ್ನೇ ನೋಡಿದ್ದ, ಈ ಷೋಡಶಿಗೆ ಅವನ ಬಟ್ಟೆಬರೆಗಳ ಮಾದರಿ, ಅವನ್ನು ಅವನು ತೊಡುವ ಮಾದರಿ. ಭಯಂಕರವಾಗಿ ಕಂಡವು.

ಅವಳು ತನ್ನ ದಿನಚರಿಯಲ್ಲಿ "ತನ್ನ ವೇಷದಮೇಲೆ ಅವನಿಗೆ ಎಳ್ಳಷ್ಟೂ ಗಮನವಿಲ್ಲ. ತನಗೊಪ್ಪದ ಬಟ್ಟೆಗಳನ್ನೇ ಹಾಕು

ತ್ತಾನೆ. ಛೆ! ಸ್ವಲ್ಪವೂ ಸುಧಾರಿಸಿಲ್ಲ'' ಎಂದು ಬರೆದುಕೊಂಡಳು.

ಆದರೇನು ಅಲೆಕ್ ಹುಟ್ಟು ಶಿಕ್ಷಕ. ಅವನಿಗದು ಲೀಲಾಜಾಲವಾಗಿ ನಿಭಾಯಿಸಬಲ್ಲ ಕೆಲಸ. ಅವನ ಉತ್ಸಾಹ, ಅವನ ಚೈತನ್ಯ ಮಾಬಲ್‌ಳನ್ನು ಅಲೆಕ್‌ನೆಡೆಗೆ ಸೆಳೆದವು. ಅವಳು ಗುರುವಾಗಿ ಅವನನ್ನು ಇಷ್ಟಪಟ್ಟಳು. ಆದರೆ 'ಅವನು ನನಗೆ ಸರಿಬೀಳುವುದಿಲ್ಲ. ಅಂತಹವನನ್ನು ನಾನು ಖಂಡಿತವಾಗಿಯೂ ಮದುವೆಯಾಗಲಾರೆ'' ಎಂದು ಯಾವ ಅಂತಃಪ್ರೇರಣೆಯಿಂದಲೋ ತನ್ನ ದಿನಚರಿಯಲ್ಲಿ ಬರೆದಳು.

ಆ ವ್ಯಕ್ತಿಯ ಬಗ್ಗೆ ಅನಾಸಕ್ತಿ ಇದ್ದರೂ ಅವನ ಪಾಠಗಳನ್ನು ಆಸಕ್ತಿಯಿಂದ ಕೇಳುತ್ತಿದ್ದಳು. ಅವನಿಂದ ಬೇಕಾದಷ್ಟು ಕಲಿತಳು. ಅದರ ಲಾಭ ಅವಳಿಗೆ ಅರಿವಾಗುವ ವೇಳೆಗೆ, ಅಲೆಕ್ ಬಂದು ''ನಾನಿನ್ನು ಅವಳಿಗೆ ಪಾಠಹೇಳುವುದಿಲ್ಲ. ನನ್ನ ಸಹೋದ್ಯೋಗಿಗಳು ಅದನ್ನು ಮುಂದುವರೆಸುತ್ತಾರೆ'' ಎಂದು ಅವಳ ತಂದೆಯ ಹತ್ತಿರ ಹೇಳಿಬಿಟ್ಟನು.

ಅವಳ ತಾಯಿಯ ಎಂತಹ ಪ್ರಶ್ನೆಗಳೂ ಬೇಡಿಕೆಗಳೂ ಅವನ ಮನಸ್ಸಿನ ಒಳತೋಟಿಯನ್ನು ಹೊರಗೆಡಹಲಿಲ್ಲ. ಮಾಬಲ್ ಮುತುವರ್ಜಿಯಿಂದಲೇ ಕಲಿಯುತ್ತಿದ್ದಳು. ಅವಳಲ್ಲಿ ಅವನಿಗಾವ ತಪ್ಪೂ ಕಂಡಿರಲಿಲ್ಲ. ''ಇಂತಹ ಸಮಯದಲ್ಲಿ ನಾನೇ ಬಂದು ಕಲಿಸುವುದು ಸರಿಯಲ್ಲ.'' ಇದಿಷ್ಟೇ ಅವನ ವಾದ !

ಆದರೆ ಅವನ ಮನಸ್ಸಿನಲ್ಲಿ ಅವಳಿಗಾಗಿ ಶ್ರೇಷ್ಠ ಸ್ಥಾನ ಒಂದು ಕ್ರಮೇಣ ನಿರ್ಮಾಣವಾಗಿತ್ತು. ಅವಳು ತನ್ನನ್ನು 'ಗುರು' ಎನ್ನುವುದಕ್ಕಿಂತಲೂ 'ಪ್ರಿಯತಮ' ಎನ್ನಲೆಂಬ ಅಭಿಲಾಷೆ ಅಂಕುರಿಸಿತ್ತು.

ಮಾಬಲ್‌ಳ ಅಗಾಧವಾದ ಅಭಿಮಾನಕ್ಕೆ ಇದು ಒಂದು ದೊಡ್ಡ ಪೆಟ್ಟಾಯಿತು. ಆದರೂ ಅವಳ ತಂಗಿಯರು, "ನಿನ್ನನ್ನು ಕಂಡರೆ ಅವರಿಗಾಗುವುದಿಲ್ಲ. ಅದಕ್ಕೆ ತಪ್ಪಿಸಿಕೊಂಡರು" ಎಂದು ಘೋಷಿಸಿದಾಗ "ಒಳ್ಳೆಯದಾಯಿತು" ಎಂದು ಹೇಳಿ ತನ್ನ ನೀಳವಾದ ಚಿನ್ನದ ಬಣ್ಣದ ಕೂದಲನ್ನು ಹಿಂದಕ್ಕೆ ಬೀಸಿಕೊಂಡು ಹೊರಟಳು.

ಆದರೆ ಅವಳಿಗೆ ಅವನ ಭೇಟಿ ಆಗಾಗ್ಗೆ ಆಗುತ್ತಲೇ ಇತ್ತು. ಒಂದು ದಿನ ಶಾಲೆ ಬಿಡುವ ವೇಳೆಗೆ ಅತಿಯಾಗಿ ಮಂಜು ಬೀಳಲಾರಂಭಿಸಿತ್ತು ಆಗ ಅಲೆಕ್, ಮಾಬಲ್‌ಳನ್ನು ಕರೆದುಕೊಂಡು ಬಂದು ಮನೆಗೆ ತಲುಪಿಸಿದ್ದನು. ಅಂದಿನಿಂದ ಅವರ ಪರಿಚಯಕ್ಕೆ ಹೊಸರೂಪ ಬಂದಿತು. ಹಬ್ಬರ್ಡ್‌ರ ಮನೆಗೆ ಅಲೆಕ್ ನಿತ್ಯ ಅತಿಥಿಯಾದನು.

ಮನೆಯವರಿಗೆಲ್ಲಾ ಅವನನ್ನು ಕಂಡರೆ ಬಹಳ ಆದರ. ಮಾಬಲ್‌ಳ ತಂಗಿಯರಂತೂ ಅವನನ್ನು ಕಂಡರೆ ಉತ್ಸಾಹದಿಂದ ಕುಣಿದಾಡುತ್ತಿದ್ದರು. ಅವನು ಹೇಳುವ ದೆವ್ವದ ಕಥೆಗಳನ್ನು ಕೇಳಿ ಆನಂದಿಸುತ್ತಿದ್ದರು. ಮಾಬಲ್‌ಳ ತಾಯಿಗೆ ಅವನ ಪಿಯಾನೊ ವಾದನವನ್ನು ಕೇಳುವ ಆತುರ. ಅವಳ ತಂದೆಗೆ ಅವನ ಹತ್ತಿರ ಚರ್ಚೆ ಮಾಡುವ ಆಕಾಂಕ್ಷೆ. ಅವರ ಮಾತುಕಥೆ ಸಾಮಾನ್ಯ ವಿಷಯಗಳನ್ನು ದಾಟಿ ಬೇಗನೆ ವಿಜ್ಞಾನದ ಕಡೆಗೆ, ಇಬ್ಬರಿಗೂ ಪ್ರಿಯವಾದ ವಿಷಯಕ್ಕೆ ಬರುತ್ತಿತ್ತು.

ಆದರೆ ಈ ಎಲ್ಲ ಆದರ ಪ್ರೀತಿ ವಿಶ್ವಾಸಗಳ ನಡುವೆ ಇದ್ದರೂ, ಅಲೆಕ್‌ನ ಮನಸ್ಸು ಬೇರೇನೋ ಯೋಚನೆಯಲ್ಲಿ ತೊಡಗಿರುತ್ತಿತ್ತು. ಅವನಿಗೆ ಬೇಕಾಗಿದ್ದುದು ಮಾಬಲ್‌ಳ ಸಾನ್ನಿಧ್ಯ

ಅವರು ತಮ್ಮ ಪ್ರಿಯವಾದ ತೋಟದ ಸಸ್ಯಗೃಹಕ್ಕೆ ಹೋಗಿ ಕುಳಿತು ಗಂಟೆಗಟ್ಟಳೆ ಮಾತನಾಡುತ್ತಿದ್ದರು. ಅಲ್ಲಿಯ ಸಸ್ಯಗಳ ಸುವಾಸನೆ ಅವಳಿಗೆ ಇಹವನ್ನು ಮರೆಸುತ್ತಿತ್ತು. ಬೆಲ್ ಅವಳಿಗೆ ರಾಜ್ಯಶಾಸ್ತ್ರದ ಬಗ್ಗೆ ಹೇಳುತ್ತಿದ್ದನು. ಹೆಂಗಸರಿಗೂ ಸಮಾನ ಹಕ್ಕು ಇರಬೇಕೆಂಬ ತನ್ನ ನಂಬಿಕೆಯನ್ನು ವಿವರಿಸುತ್ತಿದ್ದನು. ಮಾಬಲ್ ಕೇಳುತ್ತಾ ಕೇಳುತ್ತಾ ತನಗಿರುವ ಕೊರತೆಯನ್ನು ಮರೆಯುತ್ತಿದ್ದಳು. ಹೊಸ ಹೊಸ ಕ್ಷೇತ್ರಗಳನ್ನು ಪರಿಚಯ ಮಾಡಿಕೊಳ್ಳುತ್ತಿದ್ದಳು.

ತನ್ನ ಬಗ್ಗೆ ತನ್ನ ವಿಜ್ಞಾನದ ಪ್ರಯೋಗಗಳ ಬಗ್ಗೆ ಅವಳಿಗೆ ವಿವರಿಸಿ ಹೇಳುತ್ತಿದನು.

ಶ್ರೀಮಂತ ಚರ್ಮವ್ಯಾಪಾರಿಯಾದ ಥಾಮಸ್ ಸ್ಯಾಂಡರ್ಸ್‌ನ ಕಿವುಡ ಮಗನೊಬ್ಬನಿಗೆ ಪಾಠ ಹೇಳಿಕೊಡುತ್ತಾ ಅವರ ಮನೆಯಲ್ಲಿಯೇ ಅಲಿಕ್ ಇರುತ್ತಿದ್ದನು. ತನ್ನ ಕೋಣೆಯನ್ನು ಒಂದು ಪುಟ್ಟ ಪ್ರಯೋಗಶಾಲೆಯನ್ನಾಗಿ ಮಾಡಿಕೊಳ್ಳಲು ಸ್ಯಾಂಡರ್ಸ್‌ನ ಒಪ್ಪಿಗೆಯನ್ನು ಪಡೆದುಕೊಂಡಿದ್ದನು. ಅವನ ಹೆಚ್ಚು ಕಾಲ ಅಲ್ಲಿಯೇ ಕಳೆಯುತ್ತಿತ್ತು.

ಆಗ ಚಾಲ್ತಿಯಲ್ಲಿದ್ದ ದೂರಲೇಖಿ (*Telegraph*) ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ಪ್ರಯತ್ನವನ್ನು ಮಾಡುತ್ತಿದ್ದನು. ಆಗಿದ್ದ ವ್ಯವಸ್ಥೆಯಿಂದ ಒಂದು ಬಾರಿಗೆ ಒಂದು ಸಂದೇಶವನ್ನು ಮಾತ್ರ ಕಳುಹಿಸಬಹುದಾಗಿತ್ತು. ಇದರಿಂದ ವ್ಯವಹಾರ ಬಹಳ ನಿಧಾನವಾಗುತ್ತಿತ್ತು. ಅವನ ಕಲ್ಪನೆಯಲ್ಲಿದ್ದುದು "ಬಹುಮುಖ ದೂರಲೇಖಿ" (*Multiple Telegraph*).

ಒಂದು ದಿನ ಇದ್ದಕ್ಕಿದ್ದಂತೆಯೇ ಪಿಯಾನೋ ನುಡಿಸುತ್ತಿದ್ದ

ವನು ನಿಲ್ಲಿಸಿ ಹಬ್ಬರ್ಡ್‌ರ ಕಡೆಗೆ ತಿರುಗಿ ನೋಡಿ ಪೆಡಲ್ ಒತ್ತಿ ಕೊಂಡು ಪಿಯಾನೊಗೆ ನಾನು 'ಸ' ಎಂದರೆ ಅದು ನನಗೆ ಹ ಗೆಯೆ ಉತ್ತರಿಸುತ್ತದೆ—ಎಂದು ಹೇಳಿ ಪಿಯಾನೋಗೆ "ಸ……" ಎಂದು ಸವಾಲು ಹಾಕಿದನು. ಅದು ಹಾಗೆಯೇ 'ಸ' ಎಂದಿತು. ಮಾಬಲ್ ತದೇಕಚಿತ್ತದಿಂದ ಎಲ್ಲವನ್ನೂ ನೋಡುತ್ತಿದ್ದಳು. ಅವಳ ತಂದೆ ಓದುತ್ತಿದ್ದ ಪುಸ್ತಕವನ್ನು ಅಲ್ಲಿಯೇ ಬಿಟ್ಟು ಪಿಯಾನೋ ಕಡೆಗೆ ಬಂದನು. ಅಲೆಕ್ ತನ್ನ ಪ್ರಯೋಗಗಳ ಬಗ್ಗೆ ವಿವರಣೆಯನ್ನು ಮುಂದುವರೆಸುತ್ತಾ, "ಎರಡು ದೂರ ದೂರ ಇರುವ ಪಿಯಾನೋಗಳನ್ನು ಒಂದು ತಂತಿಯಿಂದ ಕೂಡಿಸಿ ಒಂದರಲ್ಲಿ ಯಾವುದಾದರೂ ಒಂದು ಸ್ವರ ವನ್ನು ನುಡಿಸಿದರೆ ಇನ್ನೊಂದು ಅದೇ ಸ್ವರದಿಂದ ಉತ್ತರಿಸುತ್ತದೆ ಎಂದನು. "ಸರಿ, ಆದರೆ ಅದರಿಂದೇನು?" ಎಂದು ವ್ಯವ ಹಾರಿಯ ಸಹಜ ಭಾವನೆಯಿಂದ ಹಬ್ಬರ್ಡ್ ಕೇಳಿದಾಗ ಬೆಲ್ ಉತ್ಸಾಹದಿಂದ ಕೆಂಪೇರಿ ತನ್ನ ದೂರಲೇಖಿಯ ಅಭಿವೃದ್ಧಿಯ ಯೋಜನೆಯ ಬಗ್ಗೆ ಹೇಳಿದನು. ತನ್ನ ಪುಟ್ಟ ಪ್ರಯೋಗಶಾಲೆ ಯಲ್ಲಿ ತಾನು ಮಾಡುತ್ತಿರುವ ಪ್ರಯೋಗಗಳ ಬಗ್ಗೆ ಹೇಳಿದನು. ಹಬ್ಬರ್ಡ್ ಸೂಕ್ಷ್ಮವನ್ನು ಗ್ರಹಿಸಿ ಸಾಕಷ್ಟು ಉತ್ತೇಜನ ಕೊಟ್ಟನು. ಅವನಿಗೂ ತನ್ನ ವ್ಯವಹಾರದಲ್ಲಿ ಆಗುತ್ತಿರುವ ನಿಧಾನ ಬೇಸರ ತಂದಿದ್ದಿತು. ವ್ಯವಹಾರವನ್ನು ತ್ವರಿತಗೊಳಿ ಸಲು, ಏನು ಮಾಡಲೂ ಸಿದ್ಧನಿದ್ದ ಹಬ್ಬರ್ಡ್, ಬೆಲ್‌ನ ಪ್ರಯೋಗಗಳನ್ನು, ಯೋಜನೆಗಳನ್ನೂ ಅತ್ಯಾದರದಿಂದ ಸ್ವಾಗತಿಸಿದನು. "ನಿಮ್ಮ ಪ್ರಯೋಗಗಳನ್ನು ಮುಂದುವರಿಸಿ. ಹಣಕ್ಕೆ ಚಿಂತಿಸಬೇಡಿ. ನಾನಿದ್ದೇನೆ. ಅದಕ್ಕೆ ಬೇಕಾಗುವ ಹಕ್ಕುಪತ್ರಗಳನ್ನು ನಾನೇ ನಿಂತು ಒದಗಿಸಿ ಕೊಡುತ್ತೇನೆ"

ಎಂದು ತಾನಾಗಿಯೇ ಸಹಾಯ ಹಸ್ತನೀಡಿದನು.

ತನಗಿರುವ ಉತ್ತೇಜನ ಕಂಡು ಅಲೆಕ್‌ನ ಕಪ್ಪು ಕಣ್ಣುಗಳು ಹೊಳೆದವು. ''ತುಂಬಾ ಅಭಿನಂದನೆಗಳು ನಿಮಗೆ. ಆದರೆ ಸ್ಯಾಂಡರ್ಸ್‌ರವರು ತಾವು ಹಣಸಹಾಯ ಮಾಡುವುದಾಗಿ ಈಗಾಗಲೇ ಮಾತು ಕೊಟ್ಟಿದ್ದಾರೆ'' ಎಂದು ಅಲೆಕ್ ಹೇಳಿದಾಗ ಹಬ್ಬರ್ಡ್ ನಿರಾಶನಾಗಲಿಲ್ಲ. 'ಆಗಲಿ' ಆದರೆ, ಒಂದು ಪ್ರಯೋಗ ಸಂಶೋಧನೆಯ ಸಮರ್ಥನೆಗೆ ನಿಮಗೆ ಬೆಂಬಲಿಗರಾಗಿ ಒಬ್ಬರಿಗಿಂತ ಇಬ್ಬರು ಲೇಸು. ನಾನೂ ಪಾಲುಗಾರನಾಗುತ್ತೇನೆ. ಅದಕ್ಕೆ ನಿಮ್ಮ ಸ್ಯಾಂಡರ್ಸ್‌ರ ಒಪ್ಪಿಗೆ ಪಡೆದುಕೊಳ್ಳಿ'' ಎಂದು ಹಬ್ಬರ್ಡ್ ಹೇಳಿದಾಗ ಅಲೆಕ್ ತನಗೊದಗಿದ ಅದೃಷ್ಟವನ್ನು ನಂಬಲೇಬೇಕಾಯಿತು.

ಪ್ರಯೋಗದ ಯೋಜನೆಯನ್ನು ಕೇಳಿದ ಕೂಡಲೇ ನಾನು ತಾನೆಂದು ಸಹಕರಿಸ ಬಂದದ್ದು ಅಲೆಕ್‌ನ ಅದೃಷ್ಟವಲ್ಲದೆ ಮತ್ತೇನು. ಎಷ್ಟು ಜನ ವಿಜ್ಞಾನಿಗಳಿಗೆ ಇಂತಹ ಲಾಯರುಗಳ, ಶ್ರೀಮಂತ ವ್ಯಾಪಾರಸ್ಥರ ನಿಸ್ಪೃಹ ಬೆಂಬಲ ಸಿಗಬಲ್ಲುದು! ಆದರೆ ಇಲ್ಲಿ ಇಬ್ಬರೂ ಅಲೆಕ್‌ನಿಗೆ ತೀರಿಸಲಾರದ ಋಣಭಾರವನ್ನು ಹೊತ್ತಿದ್ದರು. ಅದನ್ನು ಯಾರೂ ಬಾಯಿಯಲ್ಲಿ ಆಡಿ ತೋರಿಸದಿದ್ದರೂ ಅವರ ಮನದಲ್ಲಿ ಇತ್ತೆಂಬೇ: ಅವನಿಗೆ ಅದೃಷ್ಟ ದೇವತೆಯ ವರ ದೊರೆತದ್ದು.

ತನ್ನ ಮಗನ ಮೌನವನ್ನು ಒಡೆದು ಮಾತು ಕಲಿಸಿದ ಅಲೆಕ್‌ನಿಗೆ, ಸ್ಯಾಂಡರ್ಸ್ ಏನು ಬೇಕಾದರೂ ಮಾಡಲು ಸಿದ್ಧನಿದ್ದನು. ಇವರ ಅತೀವ ಉತ್ಸಾಹದಿಂದ ಬೆಲ್ ಬೇಗ ಬೇಗ ಮುಂದುವರಿಯಲು ಅನುಕೂಲವಾಯಿತು. ಅವನಿಗೆ ತನಗೆ

ಬೇಕಾದ ಉಪಕರಣಗಳನ್ನು ಮಾಡಿಕೊಳ್ಳುವ ಸಹನೆ ಇರಲಿಲ್ಲ. ಅದಕ್ಕಾಗಿ ಅವನು ಇನ್ನೊಬ್ಬರ ಕೈ ಕಾಯಬೇಕಾಗಿತ್ತು. ಆ ಕೆಲಸಕ್ಕೆ ಥಾಮಸ್ ವಾಟ್ಸನ್‌ನನ್ನು ನೇಮಿಸಿಕೊಂಡನು. ಇಬ್ಬರೂ ದಿನಕ್ಕೆ ಹದಿನೆಂಟು ಗಂಟೆಗಳ ಕಾಲ ದುಡಿಯುತ್ತಿದ್ದರು.

' ದೂರಲೇಖಿ ' ಯ ಅಭಿವೃದ್ಧಿ, ಜೊತೆಗೆ ಬರೆದವನ ಹಸ್ತಾಕ್ಷರವೇ ಪ್ರಸಾರವಾಗುವಂತೆ ಮಾಡುವ ಹಂಬಲವೂ, ಕಿವಿಯುಡಕ, (Ear-phone) ಕಿವುಡರಿಗೆ ಶಬ್ದ ಕೇಳಲು ಸಹಕರಿಸುವ ಸಾಧನವನ್ನು, ಕಂಡುಹಿಡಿಯುವ ಅತಿಯಾಸೆಯೂ ಸೇರಿದ್ದಿತು. ಇದೆಲ್ಲಾ ಅವರಿಗೆ ಕಷ್ಟಸಾಧ್ಯವಾಗಿ ಕಾಣುತ್ತಿದ್ದಿತು. ಆದರೆ ತಮ್ಮ ಯಾವ ಪ್ರಯತ್ನವನ್ನೂ ಅವರು ನಿಲ್ಲಿಸಲಿಲ್ಲ. ಪ್ರಯತ್ನ ಎಂದೂ ವ್ಯರ್ಥವಾಗುವುದಿಲ್ಲವೆಂಬುದನ್ನು ತಿಳಿದವನಿಗೆ ನಿರಾಸೆ ಇರುವುದಿಲ್ಲ. ಅಂತಹವರೇ ಮುಂದೆ ಬೆಳೆಯಬಲ್ಲರು.

ತನ್ನ ಕೆಲಸದಲ್ಲಿ ಮಗ್ನನಾಗಿದ್ದ ಅಲೆಕ್ ಒಂದು ದಿನ ಇದ್ದಕ್ಕಿದ್ದಂತೆಯೇ " ವಾಟ್ಸನ್, ನೋಡಿಲ್ಲಿ—ಹೇಗಾದರೂ ಮಾಡಿ ಒಬ್ಬರು ಮಾತನಾಡುವಾಗ ಅವರ ಬಾಯಿಯ ಮುಂದಿನ ಗಾಳಿಯ ಸಾಂದ್ರತೆಯಲ್ಲಾಗುವ ವ್ಯತ್ಯಾಸಗಳನ್ನು ವಿದ್ಯುತ್ ವ್ಯತ್ಯಾಸಗಳನ್ನಾಗಿ ಪರಿವರ್ತಿಸುವ ಉಪಕರಣ ಸಿಕ್ಕಿದರೆ ಆಗ ಶಬ್ದವನ್ನು ದೂರಕ್ಕೆ ಕಳುಹಿಸಬಹುದು. ಅಂದರೆ ದೂರಕ್ಕೆ ಮಾತನಾಡಬಹುದು." ಎಂದು ತನ್ನ ಗೆಳೆಯನಿಗೆ ವಿವರಿಸತೊಡಗಿದನು. ಇಬ್ಬರೂ ಗಂಟೆಗಟ್ಟಲೆ ಚರ್ಚೆಮಾಡಿದರು. ಕೊನೆಗೆ ಅಲೆಕ್ ತನಗೆ ಬೇಕಾಗಬಹುದಾದ ಉಪಕರಣದ ನಕ್ಷೆಯನ್ನು ಬರೆದು ಅದಕ್ಕೆ " ದೂರವಾಣಿ " (Telephone)

ಎಂದು ನಾಮಕರಣವನ್ನೂ ಮಾಡಿದನು. ಆದರೆ ಅಂತಹದೊಂದನ್ನು ಮಾಡಲು ತಗಲುವ ವೆಚ್ಚವನ್ನು ಲೆಕ್ಕಹಾಕಿ ಇಬ್ಬರೂ ಕಂಗಾಲಾದರು. "ನಮ್ಮ ಬೆಂಬಲಿಗರು ಈ ಬಿಳಿಯಾನೆ ಉಪಕರಣಕ್ಕೆ ಒಪ್ಪುವರೋ ಇಲ್ಲವೋ. ನಮ್ಮ ಮೊದಲಿನ ಯೋಜನೆಯನ್ನೇ ಮುಂದುವರೆಸುವುದು ಒಳ್ಳೆಯದು. ಸದ್ಯಕ್ಕೆ ಈ ವಿಚಾರ ಬೇಡ" ಎಂದುಕೊಂಡು ಇಬ್ಬರೂ ಸುಮ್ಮನಾದರು.

ಶ್ರೀಮತಿ ಸ್ಯಾಂಡರ್ಸ್‌ಗೆ ಅಲೆಕ್‌ನ ಊಟ ತಿಂಡಿ ನಿದ್ರೆಯದೇ ಒಂದು ಚಿಂತೆಯಾಗಿತ್ತು. ಅಲೆಕ್ ಯಾವಾಗಲೂ, ಮೇಣದ ಬತ್ತಿಯ ಬೆಳಕಿನಲ್ಲೇ ಹೆಚ್ಚು ಕೆಲಸ ಮಾಡುತ್ತಿದ್ದನು. ಅವನಿಗಾಗಿ ಹೆಚ್ಚು ಪೌಷ್ಟಿಕ ಆಹಾರಗಳನ್ನು ಒಂದು ತಟ್ಟೆಯಲ್ಲಿ ಹಾಕಿ ಅವನ ಕೋಣೆಯಲ್ಲಿಯೇ ಇಟ್ಟಿರುತ್ತಿದ್ದಳು. ರಾತ್ರಿ ಬೇಗ ಮಲಗಲೆಂಬ ಆಶಯದಿಂದ ಅವನು ಉಪಯೋಗಿಸುತ್ತಿದ್ದ ಮೇಣದ ಬತ್ತಿಯನ್ನು ಅರ್ಧಕ್ಕೆ ಕತ್ತರಿಸಿ ಇಡುತ್ತಿದ್ದಳು. ಇಂತಹ ಹಲವಾರು ನಡುರಾತ್ರಿಯ ಪ್ರಯೋಗಗಳಾದಮೇಲೆ ಅವನು 'ಬಹುಮುಖ ದೂರಲೇಖಿ' (Multiple telegraphy) ಯ ಯೋಜನೆಯನ್ನು ಕೈಬಿಡಬೇಕಾಯಿತು.

'ದೂರವಾಣಿ'ಯ ಕನಸು ಅವನಿಂದ ಇನ್ನೂ ದೂರವಾಗಿರಲಿಲ್ಲ. ೧೮೭೬ರ ಮಾರ್ಚಿ ೩ರಂದು ಅವನ ೨೮ ನೇ ಹುಟ್ಟುಹಬ್ಬ. ಆವರ್ಷ ಮುಗಿಯುವುದರೊಳಗೆ ತನ್ನ 'ದೂರವಾಣಿ' ಸಿದ್ಧವಾಗಬೇಕೆಂದು ನಿರ್ಧರಿಸಿಕೊಂಡನು. ಬಹಳ ಬಿರುಸಿನಿಂದ ಕಾರ್ಯವನ್ನಾರಂಭಿಸಿದನು.

ಈ ಉದ್ರಿಕ್ತ ದಿನಗಳಲ್ಲಿಯೂ ಅವನು ವಾರಕ್ಕೊಮ್ಮೆ ಮಾಬಲ್‌ಳನ್ನು ಭೇಟಿಯಾಗುತ್ತಿದ್ದನು. ಅವಳ ಪ್ರಸನ್ನ

ವದನ, ಚಟುವಟಿಕೆಗಳು ಅವನಿಗೆ ಉತ್ತೇಜನ ಕೊಡುತ್ತಿದ್ದುವು. ಅವಳ ಸಾನ್ನಿಧ್ಯದಲ್ಲಿ ತನ್ನ ಎಲ್ಲ ಬೇಸರವನ್ನು ಕಳೆದುಕೊಂಡು ಹೊಸ ಉತ್ಸಾಹದಿಂದ ಪ್ರತಿ ವಾರವೂ ಕಾರ್ಯಾರಂಭ ಮಾಡುತ್ತಿದ್ದನು. ಆದರೆ ಎಂದೂ ಅವನು ತನ್ನ ಗುಟ್ಟನ್ನು–ಅವಳನ್ನು ಪ್ರೇಮಿಸುವ ಗುಟ್ಟನ್ನು—ಅವಳಿಗೆ ಬಿಟ್ಟುಕೊಟ್ಟಿರಲಿಲ್ಲ.

ಅವನ ದೂರವಾಣಿಯ ಕೆಲಸ ಕೊನೆಮುಟ್ಟುವ ವೇಳೆಗೆ ಬರಸಿಡಿಲಿನಂತೆ ಒಂದು ಸುದ್ದಿ ಬಂದಿತು. ಮಾಬಲ್ ತನ್ನ ಅತ್ತೆಯ ಊರಿಗೆ ಹೊರಟಿರುವುದಾಗಿ ತಿಳಿಸಿದಳು. "ಹಿಂದಕ್ಕೆ ಬರುವುದು ಎಂದೋ ತಿಳಿಯದು" ಎಂದಾಗ ಅವನ ಹೃದಯ ಕುಸಿಯಿತು. ನಿರಾಶೆಯ ಕಾರ್ಮೋಡ ಕವಿಯಿತು. ತನಗೆ ಹೆಜ್ಜೆ ಹೆಜ್ಜೆಗೂ ಸ್ಫೂರ್ತಿದಾಯಿನಿಯಾದವಳು ದೂರ—ಬಹುದೂರ ಹೊರಟು ನಿಂತಾಗ ಅವನ ಚೇತನ ಮೂಕವಾಯಿತು.

ದಿನಗಳು ಉರುಳಿದುವು. ದೂರವಾಣಿಯ ಕೆಲಸ ಕುಂಟುತ್ತಾ ಯಾಂತ್ರಿಕವಾಗಿ ಸಾಗುತ್ತಿತ್ತು. ಮನಸ್ಸಿನ ಕೂಗನ್ನು ಸಹಿಸಲಾರದೆ ಅಲೆಕ್ ಹಬ್ಬರ್ಡ್‌ರಿಗೆ ಕಾಗದ ಬರೆದು ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಮನಸ್ಸು ನಿಲ್ಲದೇ ಅವಳ ಅತ್ತೆಯ ಊರಿಗೆ ಹೋಗಿ ಅವಳನ್ನು ಕಾಣಲು ಹಿಂಜರಿದು ಹಿಂದಕ್ಕೆ ಬಂದನು. ಅವನ ತೊಳಲಾಟವನ್ನು ಗಮನಿಸಿದ ತಂದೆ "ಮಾಬಲ್ ಒಪ್ಪಿದರೆ ನನ್ನ ಅಭ್ಯಂತರವಿಲ್ಲ" ಎಂದು ಹೇಳಿದರೂ ಅವನಿಗೆ ಮನಸ್ಸಿನಲ್ಲಿ "ಈ ಬಿಸಿಲುಗುದುರೆಯ ಬೆನ್ನೇರಿರುವವನಿಗೆ ಮಗಳನ್ನು ಕೊಡುವರೆ?" ಎಂಬ ಪ್ರಶ್ನೆ ಇದ್ದೇ ಇತ್ತು. ಮಗಳ ಸುಖವನ್ನೇ ಹೆಚ್ಚಾಗಿ ಬಯಸಿದ್ದ ತಂದೆ "ಈ ನಿನ್ನ ಕನಸಿನಿಂದ ಎಚ್ಚೆತ್ತು, ಶಾಲೆಯ ಮಾಸ್ತರಿಕೆ

ಯನ್ನೋ, ಅಥವಾ ಸರಿಯಾದ ಕೆಲಸವನ್ನೋ ಹಿಡಿದು ಮಾಬಲ್‌ಳನ್ನು ವರಿಸು" ಎಂದು ಹೇಳಲೇಬೇಕಾಯಿತು.

ಅಲೆಕ್‌ಗೆ ಎರಡನ್ನೂ ಬಿಡುವ ಮನಸ್ಸಿರಲಿಲ್ಲ. ಆದರೆ ಧೃಢ ಚಿತ್ತದಿಂದ 'ಅವಳಿಗೆ ನನ್ನಲ್ಲಿ ಪ್ರೀತಿ ಗೌರವಗಳಿದ್ದರೆ ನನ್ನ ಕೆಲಸ ಧ್ಯೇಯಗಳಲ್ಲೂ ಇರುತ್ತದೆ. ಇಲ್ಲವಾದರೆ, ಅವಳ ಅರ್ಧ ಪ್ರೀತಿ ನನಗೆ ಬೇಡ. ಅವಳು ನನ್ನ ಕೆಲಸವನ್ನು ಮದುವೆ ಯಾಗುವುದು ಬೇಡ" ಎಂದು ಉತ್ತರಿಸಿಬಿಟ್ಟನು.

ಇವರಿಬ್ಬರು ಅಲ್ಲಿಗೆ ಸುಮ್ಮನಾದರೂ, ಮಾಬಲ್‌ಳಿಗೆ ಬಹಳ ಬೇಸರವಾಯಿತು. ಅವಳ ೧೮ನೆಯ ಹುಟ್ಟು ಹಬ್ಬದ ಸಮಾರಂಭ ನಡೆಯುವಾಗ, ಅಲೆಕ್‌ನೊಡನೆ ಮಾಬಲ್ ತಮ್ಮ ಪ್ರೀತಿಯ ಸಸ್ಯಗೃಹಕ್ಕೆ ಬಂದು ಮಾತನಾಡುತ್ತಿದ್ದಳು. ಅಲ್ಲಿ ಅವಳು ತಾನು ಅವನನ್ನು ಪ್ರೀತಿಸುವುದಾಗಿ ಹೇಳಿ, ಆ ದಿನವೇ ನಿಶ್ಚಯ ಮಾಡಿಕೊಳ್ಳಬಹುದೆಂದು ತಿಳಿಸಿದಾಗ, ಅಲೆಕ್ ಒಂದು ಕ್ಷಣ ಸುಮ್ಮನೆ ಕುಳಿತು ಬಿಟ್ಟ. ಭಾಗ್ಯದ ಬಾಗಿಲು ತಾನಾ ಗಿಯೇ ತೆರೆದು ಕೊಂಡಾಗ, ಅವನಿಗೇ ಹಿಂಜರಿಯುವಂತಾ ಯಿತು. ತನ್ನ ಅವಳ ವಯಸ್ಸಿನ ಅಂತರವನ್ನು ಹೇಳಿ ಅವಳ ಮನಸ್ಸನ್ನು, ತನಗಿಷ್ಟವಿಲ್ಲದಿದ್ದರೂ, ತಿರುಗಿಸುವ ಯತ್ನಮಾಡಿ ದನು. ಮಾಬಲ್ ತನ್ನ ನಿರ್ಧಾರವನ್ನು ಹೇಳಿಯಾಗಿತ್ತು. ಇಬ್ಬರೂ ಅಂದೇ ತಮ್ಮ ನಿಶ್ಚಯ ಮಾಡಿಕೊಳ್ಳಬೇಕೆಂದು ನಿರ್ಧ ರಿಸಿದರು. ಆದರೆ ಅಲೆಕ್‌ಗೆ ಗಂಡಸಿನ ಜಂಭವಿದ್ದೇ ಇತ್ತು. ಸ್ವಲ್ಪ ತಡೆದು "ನೋಡು ಮಾಬಲ್, ನೀನೆ ಇದನ್ನು ಆರಂಭಿಸಿ ದ್ದೆಂದು ಹೇಳಬೇಕು. ತರುಣಿಯನ್ನು ನಾನು ತಿರಸ್ಕರಿಸಲಾ ದೀತೆ? ಅದಕ್ಕಾಗಿ ಒಪ್ಪಿಕೊಂಡೆ ಎಂದಾಗಬೇಕು" ಎಂದನು.

ಮಾಬಲ್ ನಕ್ಕು ತನ್ನ ಸಮ್ಮತಿ ಸೂಚಿಸಿದಳು. ಒಳ್ಳೆಯ ದಾಂಪತ್ಯದಲ್ಲಿ ಸ್ತ್ರೀಗೆ ಸೋಲೇ ಯಾವಾಗಲೂ. ಅವಳಿಗೆ ಅದರಲ್ಲೇ ತೃಪ್ತಿ.

ಈಗ ಅವನ ದೂರವಾಣಿಯ ಕೆಲಸ ಭರದಿಂದ ರೂಪುಗೊಳ್ಳಲಾರಂಭಿಸಿತು.

ಒಮ್ಮೆ ಎಡಿನ್‌ಬರೋ ವಿಶ್ವವಿದ್ಯಾನಿಲಯದಲ್ಲಿ, ಒಬ್ಬ ಜರ್ಮನ್ ಉಪಾಧ್ಯಾಯನು. ಒಂದು ಹೆಣೆಯುವ ಸೂಜಿ, ಸ್ವಲ್ಪ ತಂತಿ ಮತ್ತು ಜಾಯಿಕಾಯಿಮರ ಇವುಗಳನ್ನು ಉಪಯೋಗಿಸಿಕೊಂಡು ಒಂದು ಉಪಕರಣವನ್ನು ನಿರ್ಮಿಸಿದ್ದನು. ಅದರಲ್ಲಿ ಎರಡು ಡಬ್ಬಗಳನ್ನು ಒಂದು ತಂತಿಯಿಂದ ಸೇರಿಸಿದ್ದನು. ಒಂದು ಸಣ್ಣ ವಿದ್ಯುತ್ಕೋಶವನ್ನು ಅದಕ್ಕೆ ಜೋಡಿಸಿಕೊಂಡಿದ್ದನು. ಒಂದು ಡಬ್ಬದ ಎದುರು ಏನಾದರೂ ಸದ್ದು ಮಾಡಿದರೆ ಅದಕ್ಕನುಗುಣವಾಗಿ ಅದರ ಮುಂದಿನ ಸೂಜಿ ಕಂಪಿಸುತ್ತಿತ್ತು. ಆಗ ಎರಡನೆಯ ಡಬ್ಬದಿಂದ ಮೂಲಧ್ವನಿ ಕೇಳಿಸುತ್ತಿತ್ತು. ಇದು ಸಾಮಾನ್ಯರಿಗೆ ಅಂತಹ ವಿಶೇಷವಾಗಿ ಕಾಣಿಸದಿದ್ದಾಗ, ಅಲೆಕ್ ಅದನ್ನು ಬೆರಗುಗಣ್ಣುಗಳಿಂದ ನೋಡಿದ್ದನು. ಸೂಜಿಗೆ ಬದಲಾಗಿ ಶ್ರುತಿಕವೆಯನ್ನುಪಯೋಗಿಸಿ ಅಂದಿನಿಂದ ಒಂದೊಂದೇ ಪ್ರಯೋಗಗಳನ್ನು ಮಾಡಲಾರಂಭಿಸಿದ್ದನು.

ಬೋಸ್ಟನ್ನಿಗೆ ಬಂದ ಮೇಲೆ, ಅಲ್ಲಿಯ ಕಿವುಡರ ಶಾಲೆಯ ಅಧ್ಯಾಪಕನಾದ ಮೇಲೆ ಅವನ ಪ್ರಯೋಗಕಾಂಕ್ಷೆ ಬೆಳೆಯಿತು. ಅಲ್ಲಿ ಮಾಬಲ್‌ಳ ಪರಿಚಯವಾದಮೇಲೆ ಅವನ ಧ್ಯೇಯ ಧೃಢವಾಯಿತು. ಕಿವುಡರಿಗೆ ಕೇಳಿಸುವ ಕಿವಿಯನ್ನು ಮಾಡುವುದರಲ್ಲಿ ನಿರತನಾದನು. "ನನ್ನ ಮಾಬಲ್‌ಳಿಗೆ ಕಿವಿ ಬೇಕು."

ಎಂಬ ಅವನ ಮನದ ಕೂಗು ಅವನನ್ನು ಕಾರ್ಯರಂಗದಲ್ಲಿ ಮುಂದೆ ಮುಂದೆ ನಡೆಸಿತು.

ಬೆಲ್ ಕೃತಕ ಕಿವಿಯ ರಚನೆಗೆ ಆರಂಭಿಸಿದ್ದು ೧೮೭೩ರಲ್ಲಿ. ಅದಕ್ಕಾಗಿ ಅವನು ಸತ್ತ ಪ್ರಾಣಿಗಳ ಕಿವಿಗಳ ಪರೆಯನ್ನು ಉಪಯೋಗಿಸಿ ಪ್ರಯತ್ನ ಮಾಡುತ್ತಿದ್ದನು. ಆದರೆ ಎಲ್ಲೂ ಅವನಿಗೊಂದು ನೆಲೆ ಸಿಕ್ಕಿರಲಿಲ್ಲ. ಧ್ವನಿಯಿಂದಾಗಿ ಗಾಳಿಯಲ್ಲಿ ಉಂಟಾಗುವ ಕಂಪನಗಳನ್ನು ಏರುಪೇರಾಗುವ ವಿದ್ಯುತ್ ಪ್ರವಾಹವನ್ನಾಗಿ ಪರಿವರ್ತಿಸಬಹುದೆಂದು ತಿಳಿದಮೇಲೆ ಅವನ ಗಮನ ಮಾರ್ಗದರ್ಶನ—ಕೃತಕಕಿವಿಗಳನ್ನು ಬಿಟ್ಟು ದೂರವಾಣಿಯ ಕಡೆಗೆ ಹರಿಯಿತು. ಬದಲಾಗುವ ವಿದ್ಯುತ್ತನ್ನು ತಂತಿಯ ಮೂಲಕ ಕಳುಹಿಸಿ ಆಯಸ್ಕಾಂತಕ್ಕೆ ತಲುಪಿಸಿದರೆ ಅದರ ಮುಂದಿಡಬಹುದಾದ ಪರೆ ಕಂಪಿಸಿ ಅದೇ ಧ್ವನಿ ಹೊರಡುತ್ತದೆ ಎಂದು ಗ್ರಹಿಸಿದ ಅಲೆಕ್ ದೂರವಾಣಿಯನ್ನೇ ನೆಚ್ಚಿಕೊಂಡು ಮುಂದುವರೆದನು.

ಅವನೂ ವಾಟ್ಸನ್‌ನನೂ ಹಗಲಿರುಳೂ ಪ್ರಯೋಗಗಳನ್ನು ನಡೆಸಿದರೂ ಎಡವುತ್ತಾ ಕುಂಟುತ್ತಾ ಸಾಗುತ್ತಿದ್ದ ಅವರ ಅನ್ವೇಷಣೆಗೆ ಯಾರ ಸಹಾಯವನ್ನೂ ನಿರೀಕ್ಷಿಸುವಂತಿರಲಿಲ್ಲ. ಎಲ್ಲರೂ ಅವರ ಗುರಿಯನ್ನು ಹಗಲುಗನಸೆಂದೇ ಕರೆದಿದ್ದರು

ಯಾರಿಗೂ ಹೇಳದೆ ಜೂನ್ ೨–೧೮೭೫ ಕಾಲಿಟ್ಟಿತು. ಯಾವ ವಿಶೇಷವಾದ ಪರಿಣಾಮವನ್ನೂ ನಿರೀಕ್ಷಿಸದೆಯೇ ಇರಲಾರದೇ ಅಲೆಕ್ ತನ್ನ ನಿತ್ಯದ ಯಾಂತ್ರಿಕ ಕೆಲಸಗಳಲ್ಲಿ ತೊಡಗಿದ್ದನು. ಬೆಲ್ ಒಂದು ಕೋಣೆಯಲ್ಲಿ ಪ್ರೇಷಕ, ಗ್ರಾಹಕಗಳನ್ನು (Transmitter, Receiver) ಇಟ್ಟುಕೊಂಡು ಒಂದಾದ

ಮೇಲೊಂದರ ಬೆಣೆ (Key) ಯನ್ನು ಒತ್ತುತ್ತಾ ಪರೀಕ್ಷಿಸುತ್ತಿದ್ದನು. ಮತ್ತೊಂದು ಕೋಣೆಯಲ್ಲಿ ವಾಟ್ಸನ್ ವಿದ್ಯುತ್ ಮಂಡಲವನ್ನು ಪೂರ್ತಿ ಮಾಡಿಕೊಂಡು ನೋಡುತ್ತಾ ಕುಳಿತಿದ್ದನು. ಮಧ್ಯೆ ಮಧ್ಯೆ ಅಯಸ್ಕಾಂತಕ್ಕೂ ಸುರುಳಿಗೂ ಅಂತರವನ್ನು ಬದಲಾಯಿಸುತ್ತಾ ಪರೀಕ್ಷಿಸುತ್ತಿದ್ದಾಗ, ಪರೆ ಸ್ಪಂದಿಸುವುದನ್ನು ಗಮನಿಸುತ್ತಿದ್ದರು. ಅವು ಮಧ್ಯೆ ಸಿಕ್ಕಿಕೊಂಡಾಗ, ಎಳೆದು ಬಿಡಿಸುತ್ತಾ ತಮ್ಮ ಪ್ರಯೋಗಗಳನ್ನುಸಾಗಿಸುತ್ತಿದ್ದರು.

ಯಾವುದೋ ಒಂದು ಅಂತರದಲ್ಲಿ, ಪರೆ ಸ್ಪಷ್ಟವಾಗಿ ಸ್ಪಂದಿಸಿತು. ವಾಟ್ಸನ್‌ಗೆ ಆಯಸ್ಕಾಂತವನ್ನು ಎಳೆದು, ಬಿಡಲು, ಅಪ್ಪಣೆಯಾಯಿತು. ಇದರಿಂದಾಗಿ ಸ್ಪಂದಿಸಿದ ಪರೆ ಶಬ್ದವನ್ನು ಉತ್ಪತ್ತಿಮಾಡಿತು. ಆ ಸದ್ದನ್ನು ಕೇಳಿಸಿಕೊಳ್ಳುತ್ತಾ ಆನಂದದಿಂದ ಅಲೆಕ್ ಎಷ್ಟೋ ಹೊತ್ತು ಕಳೆದನು. ಅವನಿಗಲ್ಲದೇ ಬೇರೆಯವರಿಗೆ 'ಅದು ಭ್ರಮೆ' ಎನಿಸುವಂತಿತ್ತು ಆ ಧ್ವನಿ.

ದಿನವೆಲ್ಲ ಈ 'ಸಂಗೀತ' ವನ್ನೇ ಆಲಿಸುತ್ತಾ ಕುಳಿತ ಬೆಲ್‌ಗೆ, ತನ್ನ 'ದೂರವಾಣಿ' ಇನ್ನು ಬಹಳ ದೂರವಿಲ್ಲ ಎಂಬ ಅರಿವಾಯಿತು. ಅವನೇನಾದರೂ ಈ ಸಣ್ಣ ಧ್ವನಿಯನ್ನು ಗಮನಿಸದಿದ್ದರೆ—ಅವನ ಕನಸು ಹಾಗೆಯೇ ಉಳಿಯಬೇಕಾಗುತ್ತಿತು.

ಆಗಲೇ ಹಬ್ಬರ್ಡ್‌ನಿಗೆ, "ಧ್ವನಿಯನ್ನು ತಂತಿಯ ಮೂಲಕ ಕಳುಹಿಸಲು ಇಂದೇ ಸಾಧ್ಯವಾಯಿತು. ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಶಬ್ದವನ್ನು ಸರಾಗವಾಗಿ ಕಳುಹಿಸುವ ಏರ್ಪಾಡು ಸಿದ್ಧವಾಗಿದೆ. ನಾಳೆ ನಿಮ್ಮನ್ನು ಕಾಣುತ್ತೇನೆ" ಎಂದು ಒಂದು ಕಾಗದ ಬರೆದು, ಅದನ್ನು ತಲುಪಿಸಿ ಮನೆಗೆ ಹೋಗುವಂತೆ ವಾಟ್ಸನ್‌ಗೆ ನಿರ್ದೇಶಿಸಿ, ತಾನು ಮಾತ್ರ ಇಡೀ

ರಾತ್ರಿಯನ್ನು, ತನ್ನ ಆನಂದವನ್ನು ಸವಿಯುತ್ತಾ ಕುರ್ಚಿಯಲ್ಲಿ ಕುಳಿತೇ ಕಳೆದನು.

ಮಾರನೇಯ ದಿನ ಹಬ್ಬರ್ಡ್‌ನನ್ನು ಕಂಡ ಬೆಲ್ ಎಲ್ಲವನ್ನೂ ವಿವರಿಸಿ, "ಇಂದು ಬರಿಯ ಶಬ್ದವನ್ನೇ ಪ್ರಸಾರ ಮಾಡಲಾಯಿತು. ಆದರೆ ಒಂದು ದಿನ ಸಂಗೀತವನ್ನೂ, ಮಾತನ್ನೂ ಪ್ರಸಾರ ಮಾಡುವ ಯಂತ್ರವನ್ನು ಮಾಡುತ್ತೇನೆ. ತತ್ವ ತಿಳಿದ ಮೇಲೆ ಕೆಲವೇ ದಿನಗಳಲ್ಲಿ ಎಲ್ಲ ಮಾಡಬಹುದು" ಎಂದಾಗ, ಹಬ್ಬರ್ಡ್ ಕೂಡ ಉತ್ಸಾಹಿತನಾದನು. "ಒಳ್ಳೆಯದು ಅಲೆಕ್ ಎಲ್ಲ ಮುಗಿಯುತ್ತಿದ್ದ ಹಾಗೆ ಹೇಳು. ಅದರ ಹಕ್ಕು ಸ್ಥಾಪಿಸುವ ಕಾರ್ಯವನ್ನು ನಾನು ಆರಂಭಿಸುತ್ತೇನೆ" ಎಂದನು. ಒಂದು ಒಳ್ಳೆಯ ಪರೆ ಹುಡುಕುವುದರಲ್ಲಿ ತಿಂಗಳುಗಳು ಉರುಳಿದುವು. ತನ್ನ ಮುಂದೆ ಉಂಟಾಗುವ ಸಾಂದ್ರತೆಯ ವ್ಯತ್ಯಾಸಕ್ಕೆ ಸರಾಗವಾಗಿ ದೃಢವಾಗಿ ಸ್ಪಂದಿಸುವ ಪರೆಯೊಂದು ಅವರಿಗೆ ಕೊನೆಗೆ ಸಿಕ್ಕಿತು.

೧೮೭೬ ರ ವೇಳೆಗೆ ಅವರ ದೂರವಾಣಿಯ ಮೊದಲ ಮಾದರಿಯೊಂದು ಸಿದ್ಧವಾಯಿತು. ಕೆಲವು ಗಜಗಳಂತರದಲ್ಲಿರುವ ಕೋಣೆಗಳಲ್ಲಿ ಗ್ರಾಹಕ ಪ್ರೇಷಕಗಳನ್ನು ಜೋಡಿಸಿಕೊಂಡು ತಮ್ಮ ಮೊದಲ ಪ್ರಯೋಗವನ್ನು ಇಬ್ಬರೂ ಆರಂಭಿಸಿದರು. ಅಷ್ಟರಲ್ಲಿ ಪ್ರೇಷಕದ ಕೋಣೆಯಲ್ಲಿದ್ದ ಅಲೆಕ್ ಆಮ್ಲವನ್ನು ಸುರಿದುಕೊಂಡು ರಂಪವೆಬ್ಬಿಸಿಕೊಂಡನು. ಅಸಹಾಯಕನಾಗಿ "ವಾಟ್ಸನ್ ಸ್ವಲ್ಪ ಬರುತ್ತೀಯಾ ಈಗಲೆ ನಿನ್ನ ಅವಶ್ಯಕತೆ ಇದೆ" ಎಂದು ಕೂಗಿದನು. ವಾಟ್ಸನ್ ಬಳಿಯಲ್ಲಿಯೇ ಇರುವನೆಂಬ ಭ್ರಮೆ ಇಂದ ಕೂಗಿದನು. ಗ್ರಾಹಕದೊಡನೆ ಇದ್ದ ವಾಟ್ಸನ್ ಒಡೆಯನ

ಕೂಗು ಕೇಳಿ ತಬ್ಬಿಬ್ಬಾದನು. ಕೋಣೆಯಲ್ಲೆಲ್ಲೂ ಅಲೆಕ್‌ನ ಸುಳಿವಿಲ್ಲ. ಆದರೂ ಅವನ ಧ್ವನಿ ಸ್ಪಷ್ಟವಾಗಿ, ಕೇಳುತ್ತಿದೆ. ಮತ್ತೆ ಅದೇ ಕೂಗು ಕೇಳಿಸಿತು. ಹೌದು ಅಲೆಕ್‌ನ ಧ್ವನಿ ಬರುತ್ತಿರುವುದು ತನ್ನ ಬಳಿ ಇರುವ ಈ ಯಂತ್ರದಿಂದ! ಇದ್ದಂತೆಯೇ ಓಡಿ ಬಂದ ವಾಟ್ಸನ್ "ನನಗೆ ಕೇಳಿಸಿತು" ಎಂದು ಉತ್ಸಾಹದಿಂದ ಕೂಗಿಕೊಂಡನು. ಆಗಲೇ ಅಲೆಕ್‌ಗೆ ತಾನು ಪ್ರೇಷಕದೊಳಕ್ಕೆ ತಾನು ಮಾತಾಡಿದುದರ ಅರಿವಾದುದು. ಈಗ ಅವನಿಗೆ ತಾನು ವಾಟ್ಸನ್‌ನನ್ನು ಕರೆದಕಾರಣ ಮರೆತು ಹೋಯಿತು. ಇನ್ನೊಮ್ಮೆ ಮತ್ತೊಮ್ಮೆ ಪ್ರೇಷಕನ ಮುಂದೆ ಮಾತನಾಡಿ ತಣಿದನು. ಇಬ್ಬರೂ ಸರದಿಯ ಮೇಲೆ ಮಾತ ನಾಡಿ, ಕೇಳಿಸಿಕೊಂಡು ತಣಿದರು. ಸಹಜವಾಗಿಯೇ ತಾಯ್ನಾಡನ್ನು ಸ್ಮರಿಸಿಕೊಂಡ ಅಲೆಕ್, ತನ್ನಮಾತಿನ ಮಾಲೆಯ ಕೊನೆಯಲ್ಲಿ 'ದೇವರು ರಾಣಿಯನ್ನುರಕ್ಷಿಸಲಿ' "God save the queen!" ಎಂದನು.

ಹಬ್ಬರ್ಡ್ ಸಮಯೋಚಿತವಾಗಿ ಕೆಲಸಮಾಡಿ ಅಲೆಗ್ಸಾಂಡರ್ ಗ್ರಹಾಂ ಬೆಲ್‌ಗೆ ಅವನ ೨೯ ನೇಯ ಹುಟ್ಟು ಹಬ್ಬಕ್ಕೆ ಸರಿಯಾಗಿ ದೂರವಾಣಿಯ ಹಕ್ಕು ಪತ್ರವು ತಲಪುವಂತೆ ಮಾಡಿದನು.

ಬಹಳ ವಿಜ್ಞಾನಿಗಳಿಗೆ ಇಲ್ಲದ ಅನುಕೂಲವೊಂದು ಇವನಿಗಿದ್ದಿತು. ಕಾನೂನು ಅರಿತಿರುವ, ಅವನ ಕೇಳಿಕೆ ಇಲ್ಲದೇ ಅವನಿಗಾಗಿ ಬೇಕಾದ್ದು ಮಾಡುವ ಬರುವ ತೊಂದರೆಗಳನ್ನು ಕಾನೂನು ರೀತ್ಯಾ ನಿವಾರಿಸುವ ಮಾವ–ತನ್ನವನೆನಿಸಿದ ಮಾವ- ಎಷ್ಟು ಜನರಿಗೆ ಇದ್ದಾನು ?

ಫಿಲಡೆಲ್ಫಿಯಾದ ಪ್ರದರ್ಶನಕ್ಕೆ ದೂರವಾಣಿ ಹೋಗಬೇಕೆಂದು ಹಬ್ಬರ್ಡ್ ಅಪೇಕ್ಷಿಸಿದಾಗ ಬೆಲ್ ನಿರಾಕರಿಸಿದನು. "ಅದು

ಸರಿಯಾಗಿಲ್ಲ. ಚೆನ್ನಾಗಿಲ್ಲ " ಎಂದು ನೆಪ ಹೂಡಿದನು. ಮುಖ್ಯವಾಗಿ ಅಂತಹ ಪ್ರದರ್ಶನದ ಬಗ್ಗೆ ಆಸಕ್ತಿ ಇರಲಿಲ್ಲ. "ಇನ್ನೂ ಬೇಕಾದಷ್ಟು ಸಮಯವಿದೆ. ಪ್ರದರ್ಶನಯೋಗ್ಯವಾದೊಂದು ಮಾದರಿಯನ್ನು ಮಾಡಿಕೊಂಡು ಹೋಗು" ಎಂದು ಹಬ್ಬರ್ಡ್ ಎಷ್ಟು ಹೇಳಿದರೂ ಅವನು ಒಪ್ಪಲಿಲ್ಲ. ಮಾಬಲ್ "ನೀನು ಹೋಗದಿದ್ದರೆ ನಾನು ನಿನ್ನ ಯಾವ ಮಾತನ್ನೂ ನೋಡುವುದಿಲ್ಲ" ಎಂದು ಬಿಗಿಯಾಗಿ ಕಣ್ಣುಮುಚ್ಚಿಕೊಂಡಾಗ ಅವನು ಮನಸ್ಸು ಬದಲಾಯಿಸಲೇಬೇಕಾಯಿತು. ಒಳ್ಳೆಯ ಮಾದರಿಯೊಂದನ್ನು ಮಾಡಿಕೊಂಡ ಅಲೆಕ್ ಪ್ರದರ್ಶನದಲ್ಲಿ ಹೋಗಿ ಕುಳಿತನು. ಬಂದವರಿಗೆ ವಿವರಿಸಲೆಂದು ಕಾಯುತ್ತಾ ಕುಳಿತ ಅಲೆಕ್ ಹಾಗೆಯೇ ಕುಳಿತಿರಬೇಬೇಕಾಯಿತು. ಪ್ರದರ್ಶನಕ್ಕೆ ಬಂದವರು ಅವನ ಕಡೆಗೂ ತಿರುಗದೆ ನಡೆದು ಬಿಡುತ್ತಿದ್ದರು. ಈ ವಾತಾವರಣದಲ್ಲಿ ಎರಡು ದಿನಕ್ಕೆ ಬೇಸತ್ತ ಅಲೆಕ್ ಹೊರಟು ನಿಂತಾಗ, ಅವನನ್ನು ಅಲ್ಲಿಯೇ ನಿಲ್ಲಿಸಲು ಬಹಳ ಕಷ್ಟಪಡಬೇಕಾಯಿತು.

"ಮುಂದಿನ ಆದಿತ್ಯವಾರ ಮುಖ್ಯವಾದ ಅತಿಥಿಗಳು ಬರುವವರಿದ್ದಾರೆ ಅಲ್ಲಿಯವರೆಗಾದರೂ ನೀನು ಇರಲೇಬೇಕು" ಎಂದು ಅಲೆಕ್‌ಗೆ ಆಗ್ರಹದ ಅಪ್ಪಣೆಯಾಯಿತು. ಅಂದು ಪ್ರದರ್ಶನದ ತೀರ್ಪುಗಾರರ ತಂಡದೊಡನೆ ಅಮೇರಿಕದ ವಿಜ್ಞಾನಿ ಪ್ರೊ|| ಹೆನ್ರಿ –ವಿದ್ಯುತ್ ಗಂಟೆಯನ್ನು ಕಂಡು ಹಿಡಿದವನು– ಬ್ರಿಟನ್ನಿನ ಲಾರ್ಡ್‌ಕೆಲ್ವಿನ್ ಹಾಗೂ ಬ್ರೆಜಿಲ್ ದೇಶದ ಚಕ್ರವರ್ತಿ ಚಕ್ರವರ್ತಿನಿಯರು ಬರುವವರಿದ್ದರು.

ಅಂದು ಸಂಜೆ ೭ ಗಂಟೆಯ ವೇಳೆಗೆ ತಿರುಗಿ ಸಾಕಾದ ಗುಂಪು ಬೆಲ್‌ನ ಕಡೆಗೆ ಬಂದಿತು. ಅವರಲ್ಲಿ ಕೆಲವರು ಮುಂದೆ ಹೋದರು.

ಕೆಲವರು ಸ್ವಲ್ಪ ಮಟ್ಟಿನ ನಿರುತ್ಸಾಹದಿಂದ ಅಲ್ಲಿಯೇ ಕುಳಿತರು. ಆ ವೇಳೆಗೆ ಬ್ರೈಜಿಲ್‌ನ ಚಕ್ರವರ್ತಿ ಎರಡನೇ ಪೆಡ್ರೊ "ಏನು ಪ್ರೊಫೆಸರ್ ಸಾಹೇಬರೇ ನಿಮ್ಮನ್ನು ಪುನಃ ಕಂಡದ್ದು ಬಹಳ ಸಂತೋಷವಾಯಿತು" ಎಂದು ಅಲೆಕ್‌ನ ಕೈಕುಲುಕಿದಾಗ ಅಲ್ಲಿ ಕುಳಿತವರೆಲ್ಲಾ ಎಚ್ಚೆತ್ತರು. ಅಂದು ಬೋಸ್ಟನ್ ಶಾಲೆಗೆ ವೇಷ ಮರೆಯಿಸಿಕೊಂಡು ಬಂದಿದ್ದ ಚಕ್ರವರ್ತಿ ಇಂದು ನಿಜ ವೇಷದಲ್ಲಿಯೇ ಅಲೆಕ್‌ನನ್ನು ಭೇಟಿಯಾಗಿದ್ದನು. ಕೂಡಲೇ ಅಲ್ಲಿಯ ವಾತಾವರಣವೇ ಬದಲಾಯಿತು. ಚಕ್ರವರ್ತಿಗೆ ಬೆಲ್‌ನ ಸಾಧನೆ ಏನೆಂದು ನೋಡುವ ಕುತೂಹಲ ಉಂಟಾಯಿತು. ಆಗ ಬೆಲ್ ಗ್ರಾಹಕದ ತುದಿಯನ್ನು ಚಕ್ರವರ್ತಿಯ ಕಿವಿಗೆ ಇಟ್ಟು ತಾನು ಪ್ರೇಷಕವನ್ನು ಹಿಡಿದು ಕೋಣೆಯ ಇನ್ನೊಂದು ತುದಿಗೆ ಹೋದನು. ಅಲ್ಲಿಂದ ಮಾತನಾಡಿದನು. "ಚಕ್ರವರ್ತಿಗಳೇ ಕೇಳಿಸುತ್ತಿದೆಯೇ ನಾನು ಬೆಲ್ ಮಾತನಾಡುತ್ತಿದ್ದೇನೆ" ಎಂದನು. ಚಕ್ರವರ್ತಿ ಪರಮಾಶ್ಚರ್ಯದಿಂದ "ಅಬ್ಬಾ ದೇವರೆ ಇದು ಮಾತನಾಡುತ್ತದೆ" ಎಂದು ಕೂಗಿಬಿಟ್ಟನು. ಆ ಘಳಿಗೆ ಯಿಂದಲೇ ದೂರವಾಣಿ ಪ್ರದರ್ಶನದ ಒಂದು ಪ್ರಮುಖ ಆಕರ್ಷಣೆಯಾಯಿತು. ಪ್ರೊ|| ಹೆನ್ರಿ ಗಂಟೆಗಟ್ಟಲೆ ಅದರ ಮುಂದೆಯೇ ಕುಳಿತನು. ತೀರ್ಪುಗಾರರು "ದೂರವಾಣಿ ಒಂದು ಅತಿ ಶ್ರೇಷ್ಠವಾದ ಅದ್ಭುತವಾದ ಸಾಧನ. ಈ ಉಪಕರಣವನ್ನು ಇನ್ನೂ ಪರಿಷ್ಕರಿಸಬಹುದು" ಎಂದು ತಮ್ಮ ಒಮ್ಮತದ ಅಭಿ ಪ್ರಾಯವನ್ನು ಸೂಚಿಸಿದರು.

ಸರ್ ವಿಲಿಯಂ ಥಾಮ್ಸನ್ ತನ್ನ ಮಡದಿಯೊಂದಿಗೆ ತಂತಿಯ ಒಂದು ತುದಿಯಿಂದ ಇನ್ನೊಂದು ತುದಿಗೆ ಓಡಾಡುತ್ತಾ ಹೊಸ

ಆಟಿಕೆಯನ್ನು ಕಂಡ ಸಣ್ಣ ಮಕ್ಕಳಂತೆ, ಕುಣಿದಾಡಿದನು. " ಆರಂಭದಲ್ಲಿ ಒಂದೇ ಪದವನ್ನು ಮಾತನಾಡಿದೆವು. ಕೇಳಿಸಿತು. ನಂತರ ಒಂದೊಂದು ಪದಗುಚ್ಛವೂ ಕೇಳಿಸಿತು ನಂತರ ಇಡೀ ಇಡೀ ವಾಕ್ಯಗಳನ್ನು ವೃತ್ತಪತ್ರಿಕೆಗಳಿಂದ ಓದಿದೆವು. ಅದೂ ಕೇಳಿಸಿತು. ಈ ಉಪಕರಣವನ್ನು ಮಾಡಲು ಕೆಲವು ಒರಟಾದ ಸಾಮಾನುಗಳನ್ನು ಉಪಯೋಗಿಸಿದೆ. ಇನ್ನೂ ಸೂಕ್ಷ್ಮವಾದ ಸಾಧನಗಳಿದ್ದರೆ ಬಹುಶಃ ನಾವು ನೂರಾರು ಮೈಲಿಗಳಾಚೆ ಇರುವವರೊಂದಿಗೆ ಮಾತನಾಡಬಹುದು. ಅದನ್ನು ಪ್ರೊ॥ ಬೆಲ್ ಬೇಗಮಾಡಲಿ " ಎಂದು ವಿಲಿಯಂ ಥಾಮ್ಸನ್ ತುಂಬು ಮನಸ್ಸಿನಿಂದ ಆಶೀರ್ವದಿಸಿದನು.

ಪ್ರದರ್ಶನದಲ್ಲಿ ದಿಗ್ವಿಜಯ ಸಾಧಿಸಿದ ದೂರವಾಣಿಯನ್ನು ಅಲೆಕ್ ಮತ್ತು ಅವನ ತಂದೆ ಸೇರಿ ಉತ್ತಮ ಪಡಿಸಿದರು. ಇದರಿಂದ ದೂರದ ಹಳ್ಳಿಗಳಿಗೆ ಸಂದೇಶಗಳನ್ನು ಕಳುಹಿಸಲು ಸಾಧ್ಯವಾಯಿತು. ಆದರೆ ಈ ಮಾದರಿಯಲ್ಲಿ ಸಂದೇಶ ಏಕ ಮುಖವಾಗಿ ಮಾತ್ರ ಹೋಗಬಹುದಿತ್ತು. ಇದರಿಂದ ಪರಸ್ಪ ಸಂಭಾಷಿಸಲು ಎರಡೆರಡು ತಂತಿ, ಎರಡೆರಡು ಸಾಧನಗಳು ಬೇಕಾಗುತ್ತಿತ್ತು. ವಾಟ್ಸನ್ ಮತ್ತು ಬೆಲ್ ಸೇರಿ ಈ ನ್ಯೂನತೆ ಯನ್ನು ಹೋಗಲಾಡಿಸಿದರು. ಇದರಿಂದ ಒಂದೇ ತಂತಿಯ ಮೂಲಕ ಸಂಭಾಷಿಸಲು ಅನುಕೂಲವಾಯಿತು.

ವಿಜ್ಞಾನಿಗಳ ಜಗತ್ತು ದೂರವಾಣಿಯನ್ನು ಪ್ರಶಂಸಿದರೂ ಸಾಮಾನ್ಯರು ಅದನ್ನಿನ್ನೂ ಅಷ್ಟಾಗಿ ಅರ್ಥಮಾಡಿಕೊಂಡು, ಉಪಯೋಗಿಸುವಷ್ಟು ಮುಂದೆ ಬಂದಿರಲಿಲ್ಲ. ಹಬ್ಬರ್ಡ್, ವಾಟ್ಸನ್ ಎಲ್ಲಾ ಸೇರಿ ಬಹಿರಂಗ ಸಭೆಗಳ ಮೂಲಕ ದೂರ ವಾಣಿಯನ್ನೂ, ಅದರ ವಿಶೇಷ ಉಪಯೋಗಗಳನ್ನೂ ಪರಿಚಯ

ಮಾಡಿಕೊಟ್ಟರು. ಬೋಸ್ಟನ್ನಿನಿಂದ ಪಕ್ಕದ ಸಲೇಂಗೆ ಒಂದು ಸಂಪರ್ಕವನ್ನು ಸ್ಥಾಪಿಸಿದರು. ಬೋಸ್ಟನ್ನಿನಲ್ಲಿ ವಾಟ್ಸನ್ ಸಂಗೀತ ನುಡಿಸಿದಾಗ ಸಲೇಂನ ಜನ ಕೇಳಿ ಆನಂದಪಟ್ಟರು. ದೂರವಾಣಿ ಕ್ರಮೇಣ ಜನಪ್ರಿಯವಾಗ ತೊಡಗಿತು. ಇದರಿಂದ ಉನ್ಮತ್ತನಾದ ಬೆಲ್ ತನ್ನ ಹುಡುಗಿಗೆ ದೂರವಾಣಿಯ ಬೆಳ್ಳಿಯ ಮಾದರಿಯನ್ನು ಉಡುಗೊರೆಯಾಗಿ ಕೊಟ್ಟನು.

೧೮೭೭ರ ಆಗಸ್ಟ್‌ನಲ್ಲಿ ಅಲೆಗ್ಸಾಂಡರ್ ಗ್ರಹಾಂ ಬೆಲ್ ಮತ್ತು ಮಾಬೆಲ್ ಹಬ್ಬರ್ಡ್‌ರ ವಿವಾಹವಾಯಿತು. ಅವರು ದೂರವಾಣಿಯನ್ನು ಹಿಡಿದುಕೊಂಡು ಮಧುಚಂದ್ರಕ್ಕೆ ಇಂಗ್ಲೆಂಡಿಗೆ ಹೊರಟರು. ಅಲ್ಲಿ ತನ್ನ ಉಪಕರಣವನ್ನು ಯಶಸ್ವಿಯಾಗಿ ತಾನೇ ಪ್ರಚಾರ ಮಾಡಿಕೊಂಡನು. ನೀರಿನಾಳಕ್ಕೆ ಇಳಿದವರ ಕೂಡ ದೂರವಾಣಿಯಲ್ಲಿ ಮಾತನಾಡಿ ತೋರಿಸಿದನು. ರಾಣಿ ಅದರ ಕೆಲಸವನ್ನು ನೋಡಿ ಬಹಳ ಸಂತೋಷಪಟ್ಟಳು. ತನ್ನ ಓಸ್ಬೋರ್ನ್ ಮನೆಗೂ ಸೌತ್‌ಹಾಂಪ್ಟನ್, ಲಂಡನ್‌ಗಳಿಗೂ ಸಂಪರ್ಕವೇರ್ಪಡಿಸಿಕೊಂಡಳು. ಲಂಡನ್‌ನಲ್ಲಿ ನಡೆದ ಸಂಗೀತ ಕಛೇರಿಯನ್ನು ತನ್ನ ಓಸ್ಬೋರ್ನ್ ಮನೆಯಿಂದ ಕೇಳಿ ಸಂತಸಪಟ್ಟಳು ಅಲ್ಲಿಯ ಲೋಕಸಭೆಯಲ್ಲಿ ಒಂದು ದೂರವಾಣಿಯನ್ನು ಸ್ಥಾಪಿಸಿದನು. ಲೋಕಸಭೆಯ ಕಾರ್ಯಕ್ರಮವನ್ನು ದೂರದ ಒಂದು ವೃತ್ತಪತ್ರಿಕೆ ಕಛೇರಿಯು ಕೇಳಿ ಮಾರನೇಯ ದಿನವೇ ತನ್ನ ಪತ್ರಿಕೆಯಲ್ಲಿ ಪ್ರಕಟಿಸಿತು!

ಆವರೆ 'ದೂರವಾಣಿ'ಯ ಸ್ಥಿರವಾದ ಸಂಪರ್ಕವೇರ್ಪಟ್ಟಿದ್ದು ಬರ್ಲಿನ್ ನಗರದಲ್ಲಿ. ೧೮೭೭ರ ನವೆಂಬರ್‌ನಲ್ಲಿ, ಇಂಗ್ಲೆಂಡಿನಿಂದ ಒಂದು ಮಾದರಿಯನ್ನು ತಂದು ಅಲ್ಲಿ ಸ್ಥಾಪಿಸಿಕೊಂಡ ಔದ್ಯೋಗಿಕನೊಬ್ಬ, ಜರ್ಮನಿಯಲ್ಲಿ ಅದನ್ನು ಅಧಿಕ ಸಂಖ್ಯೆಯಲ್ಲಿ ತಯಾ

ರಿಸಿ ಬೇಕಾದಷ್ಟು ಹಣ ಮಾಡಿಕೊಂಡನು. ಆದರೆ ಅವು ಆಟಿಕೆಗಳಂತೆ ಇದ್ದವು. ಬಹಳ ದೂರಕ್ಕೆ ಸಂಪರ್ಕ ಸಾಧ್ಯ ವಿರಲಿಲ್ಲ. ಆದರೆ ಬರ್ಲಿನ್‌ನವರಿಗೆ ಹೊಸದನ್ನು ತಿಳಿಯುವ, ಆದಷ್ಟು ಬೇಗ ಅದನ್ನು ಉಪಯೋಗಿಸುವ ಆತುರ ಹೆಚ್ಚು. ಅವರು ಹೊಸ, ಪುಟ್ಟ ದೂರವಾಣಿಯನ್ನು ಉಪಯೋಗಿಸಿ ಸಂತೋಷಪಟ್ಟರು.

ಬೆಲ್ ದಂಪತಿಗಳು ಇಂಗ್ಲೆಂಡಿನಲ್ಲಿ ತಮ್ಮ ಸಂತಸದ ದಿನ ಗಳನ್ನು ಕಳೆಯುತ್ತಿರುವಂತೆಯೇ, ಅಮೇರಿಕಾದಲ್ಲಿ ಹಬ್ಬರ್ಡ್ ಮತ್ತು ಸ್ಯಾಂಡರ್ಸ್ ತಮ್ಮ ವೈಯಕ್ತಿಕ ಬೆಂಬಲದಿಂದ ಒಂದು ಪುಟ್ಟ ದೂರವಾಣಿ ಕೇಂದ್ರವನ್ನು ಸ್ಥಾಪಿಸಿ ಅಭಿವೃದ್ಧಿಗೊಳಿಸು ತ್ತಿದ್ದರು. ಅದಕ್ಕೆ ಸುಮಾರು ೩೦೦೦ ಜನ ಸದಸ್ಯರಾದರು. ಆಗಲೇ ಅಲ್ಲಿ ಇನ್ನೊಂದು ವೆಸ್ಟರ್ನ್ ಯೂನಿಯನ್ ಟೆಲಿಗ್ರಾಫ್ ಕಂಪೆನಿ ಕಾಲಿಟ್ಟಿತು. ಅವರು "ನಾವು ಎಲ್ಲದಕ್ಕಿಂತ ಒಳ್ಳೆಯ ದೂರವಾಣಿಯನ್ನು ಸರಬರಾಜು ಮಾಡುತ್ತೇವೆ. ನಮ್ಮ ವಿಜ್ಞಾನಿಗಳು ಥಾಮಸ್ ಆಲ್ವ ಎಡಿಸನ್, ಎಲಿಷಗ್ರೇ ಮತ್ತು ಪ್ರೊ॥ ಡಾಲ್‌ಬೇರ್" ಎಂದು ಪ್ರಚಾರ ಮಾಡಿತು. ಬೆಲ್ ಕಂಪೆನಿಯವರು ಮೊದಲೇ ಆರಂಭಿಸಿದ್ದರಿಂದ ಅವರನ್ನು ಕೇಳಿ ಮುಂದುವರಿಸಬೇಕೆಂಬ ಸಲಹೆಯನ್ನು ಇವರು ನಿರಾಕರಿಸಿದರು. ತಮ್ಮಂತಹ ದೊಡ್ಡವರು ಒಬ್ಬ ಕಿವುಡರ ಅಧ್ಯಾಪಕನಿಗೆ ಮನ್ನಣೆ ಕೊಡುವುದೆಂದರೇನು ? ಎಂದೆನಿಸಿತು ಅವರಿಗೆ. ತಕ್ಷಣವೇ ತಮ್ಮ ವಿಜ್ಞಾನಿಗಳನ್ನು ಕರೆಸಿಕೊಂಡು " ಹೇಗಾದರೂ ಮಾಡಿ 'ದೂರ ಲೇಖಿ'ಯು ಮಾತನ್ನೂ ಆಡುವಂತೆ ಮಾಡಿಕೊಡಿ " ಎಂದು ಅವಸರಿಸಿದರು. ಆದರೆ ಪ್ರತಿಷ್ಠೆಗೆ ವಿಜ್ಞಾನ ತಲೆಬಾಗುವುದೇ ? ಅವರು ಕೊಟ್ಟ ಅವಧಿಯಲ್ಲಿ ದೂರವಾಣಿಯ ಸ್ಥಾಪನೆಯಾಗಲಿಲ್ಲ.

ಆದರೆ ೧೮೭೮ ರ ವೇಳೆಗೆ ಎಲಿಷಗ್ರೇ ಮತ್ತಿತರು ಒಂದನ್ನು ತಯಾರಿಸಿದರು. ಈಗ ಬೆಲ್‌ನ ಹಕ್ಕುಗಳನ್ನು ಕಾಪಾಡಬೇಕಾದರೆ ಪುಟ್ಟ ಬೆಲ್ ಕಂಪೆನಿಯು, ದೊಡ್ಡ ವೆಸ್ಟರ್ನ್ ಯೂನಿಯನ್ ಕಂಪೆನಿಯ ವಿರುದ್ಧ ದಾವಾ ಹಾಕಾಬೇಕಾಯಿತು. ಹಬ್ಬರ್ಡ್ ಈ ಉಳಿದ ಒಂದೇ ಹಾದಿಯನ್ನು ಕೂಡಲೇ ಅನುಸರಿಸಬೇಕಾಗಿತ್ತು. ಅಲೆಕ್‌ನಿಗೆ ಆ ಬಗ್ಗೆ ವಿವರವಾಗಿ ಬರೆದು ತಕ್ಷಣವೇ ಅಮೇರಿಕಾಗೆ ವಾಪಸ್ಸಾಗಬೇಕೆಂದು ತಂತಿ ಕಳುಹಿಸಿದನು.

ಸಂತೋಷ ಸಮಾಧಾನಗಳಿಂದ ಇಂಗ್ಲೆಂಡಿನಲ್ಲಿದ್ದ ಬೆಲ್‌ಗೆ ಈ ಸುದ್ದಿಯಿಂದ ಬಹಳ ಬೇಸರವಾಯಿತು. ದೊಡ್ಡವರೆನಿಸಿಕೊಂಡವರಿಗೆ ಇಷ್ಟರ ಮಟ್ಟಿನ ಜವಾಬ್ದಾರಿ ಇದ್ದರೆ ನನಗೆ ಅವರ ಸಂಪರ್ಕವೇ ಬೇಡ, ದೂರವಾಣಿಯನ್ನು ಅವರೇ ಇಟ್ಟುಕೊಳ್ಳಲಿ ಎಂದು ಹೇಳಿ 'ಅಮೇರಿಕಾಗೆ ಹಿಂತಿರುಗುವುದಿಲ್ಲ'ವೆಂಬ ತನ್ನ ತೀರ್ಮಾನವನ್ನು ಮಾವನಿಗೆ ತಿಳಿಸಿಬಿಟ್ಟನು. ಕೆನಡಕ್ಕೆ ಹೋಗಿ ಯಾವುದಾದರೂ ಶಾಲೆಗೆ ಸೇರುವುದಾಗಿ ನಿರ್ಧರಿಸಿಕೊಂಡನು. ತನ್ನ ಮಾಬಲ್‌ಳಿಗೆ ಸುದ್ದಿ ತಿಳಿಸುವಾಗ ಅವನ ಭಾವೋದ್ರೇಕ ಹೊರಹೊಮ್ಮಿತು. "ಮಾಬಲ್ ನನ್ನ ದೂರವಾಣಿಯನ್ನು ಕಳೆದುಕೊಂಡೆ. ನಾವು ಕ್ವಿಬೆಕ್‌ಗೆ ಹೋಗೋಣ" ಎಂದು ಹೇಳಿದನು. ಗಂಡನ ಸ್ವಭಾವದ ಪರಿಚಯ ಚೆನ್ನಾಗಿದ್ದ ಮಾಬಲ್ ಉತ್ತರಿಸಲಿಲ್ಲ. ಲಂಡನ್‌ಗಿಂತ ಕ್ವಿಬೆಕ್ ಬೋಸ್ಟನ್ನಿಗೆ ಹತ್ತಿರ ಎಂದು ಅವಳಿಗೆ ತಿಳಿಯದೇ? ಮೊದಲು ಕ್ವಿಬೆಕ್‌ಗೆ ಹೋಗಬೇಕೆಂಬ ನಿರ್ಣಯವಂತೂ ಆಯಿತು. ಅಲ್ಲಿ ಥಾಮಸ್ ವಾಟ್ಸನ್ ಅವರನ್ನು ಎದುರುಗೊಳ್ಳಲು ಬಂದಿದ್ದನು ಅವನನ್ನು ಕಂಡ ಮಾಬಲ್‌ಳಿಗೆ ಹೊರೆಭಾರ ಇಳಿದಂತಾಯಿತು.

ಅಲೆಕ್‌ನ ತಂತಿಯನ್ನು ಕಂಡು ಹಬ್ಬರ್ಡ್, ಸ್ಯಾಂಡರ್ಸ್

ಮತ್ತು ವಾಟ್ಸನ್ ಆಲೋಚನೆ ಮಾಡಿ ಅವನು ಬರದೆ ವಿಧಿ ಇಲ್ಲವೆಂದು ತೀರ್ಮಾನಿಸಿದರು. ಆದರೆ ಅವನನ್ನು ಕರೆತರಲು ವಾಟ್ಸನ್ನೇ ಸರಿಯೆಂದು ಅವನನ್ನು ಕ್ವಿಬೆಕ್‌ಗೆ ಕಳುಹಿಸಿದ್ದರು.

ಅವನ ಯಾವ ಮಾತೂ ಅಲೆಕ್‌ನ ನಿರ್ಧಾರವನ್ನು ಬದಲಿಸಲಿಲ್ಲ. ಆದರೆ ವಾಟ್ಸನ್ ಸೋಲಲಿಲ್ಲ. ನಿನಗಾಗಿ ಇಷ್ಟು ಮಾಡಿದ ಹಬ್ಬರ್ಡ್, ಸ್ಯಾಂಡರ್ಸ್‌ಗಾಗಿಯಾದರೂ ನೀನು ಬರಲೇಬೇಕು ಎಂದಾಗ, ಅಲೆಕ್ ತನ್ನ ಮನಸ್ಸಿಗೆ ವಿರುದ್ಧವಾಗಿ ಒಪ್ಪಿ ಬೋಸ್ಟನ್ನಿಗೆ ಹೊರಡಲೇಬೇಕಾಯಿತು.

ಒಂದು ವರ್ಷಕಾಲ ನಡೆದ ಅವರ ಫಿರ್ಯಾದು ಬೆಲ್ ಕಂಪೆನಿಯ ಪರವಾಗಿ ನಿರ್ಧಾರವಾಯಿತು. ವೆಸ್ಟರ್ನ್ ಕಂಪೆನಿಯವರು ರಾಜಿ ಮಾಡಿಕೊಳ್ಳಬೇಕೆಂದಾಯಿತು. ಬೆಲ್ ಕಂಪೆನಿಯವರು ಅವರಿಗೆ ೧/೫ ಪಾಲು ಬಡ್ಡಿಯನ್ನು ಕೊಡಲೊಪ್ಪಿದರು. ಈ ವಿಜಯದಿಂದ ಪುಟ್ಟ ಕಂಪೆನಿಯ ಅದೃಷ್ಟ ಮುಗಿಲು ಮುಟ್ಟಿತು. ಅಭ್ಯಾಸವಿಲ್ಲದ ಶ್ರೀಮಂತಿಕೆಯಿಂದ ಅಲೆಕ್ ತಬ್ಬಿಬ್ಬಾದನು.

ವಾಷಿಂಗ್ಟನ್ ಮತ್ತು ಸಾನ್ ಫ್ರಾನ್ಸಿಸ್ಕೋ ನಗರಗಳ ನಡುವೆ, ೧೯೧೫ ರಲ್ಲಿ, ದೂರವಾಣಿ ಸಂಪರ್ಕವೇರ್ಪಟ್ಟಿತು. ವಾಟ್ಸನ್ ಮತ್ತು ಬೆಲ್ ಒಂದೊಂದು ಕೊನೆಯಲ್ಲಿ ನಿಂತು ಅದನ್ನು ಉದ್ಘಾಟಿಸಿದರು. ೪೦ ವರ್ಷಗಳ ಕೆಳಗೆ ಅವರು ಉಪಯೋಗಿಸಿದ್ದ ಉಪಕರಣದಂತೆಯೇ ಇದೂ ಇದ್ದಿತು. ಅಷ್ಟೇ ಉತ್ಸಾಹ ಸಂತೋಷ ಬೆರಗುಗಳಿಂದ ಅವರು ಪರಸ್ಪರ ಮಾತನಾಡಿದರು. "ವಾಟ್ಸನ್ ಬರುತ್ತೀಯಾ, ನಿನ್ನ ಅವಶ್ಯಕತೆ ನನಗಿದೆ" ಎಂದು ಬೆಲ್ ಹೇಳಿದಾಗ ವಾಟ್ಸನ್ "ಓಹೋ ಅಗತ್ಯವಾಗಿ, ಆದರೆ ಈಗ ನಿಮ್ಮಲ್ಲಿಗೆ ಬರಲು ನನಗೆ ಒಂದು

ವಾರವಾದರೂ ಬೇಕು" ಎಂದು ನಗುತ್ತಾ ಉತ್ತರಿಸಿದನು. ಇಬ್ಬರೂ ಮನಃ ಪೂರ್ವಕವಾಗಿ ನಕ್ಕರು.

೧೮೮೦ ರಲ್ಲಿ ಬೆಲ್ ಬೆಳಕಿನ ಕಿರಣದ ಮೂಲಕ, ಧ್ವನಿಯನ್ನು ಕಳುಹಿಸುವ ಸಾಧನವನ್ನು ಕಂಡು ಹಿಡಿಯಲು ಪ್ರಯತ್ನ ಮಾಡಿದನು. ಈ ಸಾಧನಕ್ಕೆ 'ಫೋಟೋ ಫೋನ್' ಅಥವಾ ಪ್ರಭಾವಾಣಿ ಎಂದು ಹೆಸರು. ಸೆಲೀನಿಯಂ ಎಂಬ ಲೋಹವು, ತನ್ನ ಮೇಲೆ ಬೆಳಕು ಬಿದ್ದಾಗ ಮತ್ತೂ ಉತ್ತಮ ವಿದ್ಯುತ್ ವಾಹಕವಾಗುತ್ತದೆ. ಬೆಳಕಿನ ಪ್ರಮಾಣದ ವ್ಯತ್ಯಾಸಕ್ಕನುಗುಣವಾಗಿ ಅದರ ಮೂಲಕ ಹರಿಯುವ ವಿದ್ಯುತ್ ಬದಲಾವಣೆಯಾದರೆ ಆಗ "ಫೋಟೋ ಫೋನ್" ಸಾಧ್ಯ ಎಂದು ಬೆಲ್ ಮತ್ತು ಅವನ ಗೆಳೆಯ ಸಮ್ನರ್ ಟೈಂಟರ್ ತರ್ಕಿಸಿದರು.

ಸುಮಾರು ೪೦ ರಂಧ್ರಗಳುಳ್ಳ ವೃತ್ತಾಕಾರದ ತಿರುಗುತ್ತಿರುವ ತಟ್ಟೆಯಮೇಲೆ ಸೂರ್ಯನ ಕಿರಣವನ್ನು ಕೇಂದ್ರೀಕರಿಸಿದರು. ಈ ಬೆಳಕನ್ನು ಸಮಾನಾಂತರವಾಗಿ ಮಾಡಲು ಒಂದು ಮಸೂರವನ್ನುಉಪಯೋಗಿಸಿದರು. ಇನ್ನೊಂದು ಮಸೂರ ಈ ಬೆಳಕನ್ನು ಸೆಲೀನಿಯಂ ಲೋಹದ ಮೇಲೆ ಕೇಂದ್ರೀಕರಿಸಿತು. ಈ ಸೆಲೀನಿಯಂ ಲೋಹವನ್ನು ದೂರವಾಣಿಗೆ ಹೊಂದಿಸಿದರು. ಅದರ ಮೂಲಕ ಸಂಗೀತವನ್ನು ಕೇಳಿದರು. ಇಲ್ಲಿಗೆ ಅವರ ಆಸೆ ಮುಗಿಯಲಿಲ್ಲ. ಬಹಳ ಪ್ರಯತ್ನಪಟ್ಟು, ಇದೇ ತರಹದ ಪ್ರೇಕ್ಷಕ ಒಂದನ್ನು ತಯಾರಿಸಿಕೊಂಡರು. ಅದರಲ್ಲಿ ಧ್ವನಿಯ ಏರಿಳಿತಕ್ಕೆ ತಕ್ಕಂತೆ ಒಂದು ತೆಳುವಾದ ದರ್ಪಣವು ಚಲಿಸುತ್ತಿತ್ತು. ಇದರಿಂದ ಪ್ರತಿಫಲ್ಸಿದ ಬೆಳಕು ಅದೇ ರೀತಿಯಲ್ಲಿ ಸ್ಪಂದಿಸುತ್ತಿತ್ತು. ಈ ಬೆಳಕು ಸಲೀನಿಯಂ ಲೋಹವನ್ನು ಪ್ರಚೋದಿಸುತ್ತಿತ್ತು. ಮುಂದಿನ ಕ್ರಿಯೆಗಳು ಜರುಗಿ ಮೂಲಧ್ವನಿ ಕೇಳಿಸುತ್ತಿತ್ತು.

ಇದರ ಯಶಸ್ವೀ ಪ್ರಯೋಗವನ್ನು ವಾಷಿಂಗ್ಟನ್‌ನಲ್ಲಿ ಬೆಲ್ ಮತ್ತು ಸಮ್ನರ್ ಟೈಂಟರ್ ಮಾಡಿದರು. ಸಮ್ನರ್ ಪ್ರೇಷಕ ದೊಂದಿಗೆ ಒಂದು ಮನೆಯ ಮೇಲ್ಛಾವಣಿಯನ್ನು ಹತ್ತಿದನು. ಅಲ್ಲಿಂದ ಪ್ರತಿಫಲಿಸುವ ಕಿರಣವು ೭೦೦ ಅಡಿಗಳಾಚೆ ಇದ್ದ ಪ್ರಯೋಗ ಶಾಲೆಯ ಕಿಟಕಿಗೆ ಸರಿಯಾಗಿ ಬೀಳುವಂತೆ ತನ್ನ ಪ್ರೇಷಕವನ್ನು ಜೋಡಿಸಿಕೊಂಡನು. ಸಮ್ನರ್ ಮೇಲಿನಿಂದ "ಬೆಲ್ ನಿನಗೆ ನಾನಾಡುವ ಮಾತು ಕೇಳಿಸಿದರೆ, ಕಿಟಕಿಯಿಂದ ಹೊರಗೆ ನಿನ್ನ ಟೋಪಿಯನ್ನು ಬೀಸು" ಎಂದ ಕೂಡಲೇ ಪ್ರಯೋಗಶಾಲೆಯಿಂದ ಹೊರಗೆ ಬೆಲ್‌ನ ಟೋಪಿಯು ಅಲ್ಲಾಡು ವುದು ಕಾಣಿಸಿತು !

ಈಗ ಸೆಲೀನಿಯಂ ಲೋಹಕ್ಕೆ ಬೇಕಾದಷ್ಟು ಉಪಯೋಗಗಳು ಇವೆ. ಈ "ಫೋಟೋ ಫೋನ್" ಅಷ್ಟಾಗಿ ಚಾಲ್ತಿಗೆ ಬರಲಿಲ್ಲ. ಬಂದಿದ್ದರೂ ಈಗಿನ ನಿಸ್ತಂತಿ ಪ್ರಸಾರ ಅದನ್ನು ಹಿಮ್ಮೆಟ್ಟಿಸು ತ್ತಿತ್ತು. ಆದರೆ ಎಂದಾದರೂ, ದೂರದ ಗ್ರಹದಿಂದ ಭೂಮಿಗೆ, ಫೋಟೋಫೋನ್‌ನ ಮೂಲಕ ನೇರವಾಗಿ ಸುದ್ದಿ ಮುಟ್ಟೀತು!

ಆದರೆ ಇಷ್ಟರ ಮಧ್ಯೆ ಅವನಿಗೆ ಅತೃಪ್ತಿಯ ಸೆಲೆ ಇದ್ದೇ ಇತ್ತು. 'ಕಿವುಡಿ'ನ ಸಮಸ್ಯೆ ಅವನನ್ನು ಕಾಡುತ್ತಲೇ ಇತ್ತು. ಆಗಾಗ್ಗೆ ವಿಜ್ಞಾನಿಗಳನ್ನು ಮನೆಗೆ ಆಹ್ವಾನಿಸಿ ಆ ಬಗ್ಗೆ ಬಹಳ ವಾಗಿ ಚರ್ಚಿಸುತ್ತಲೆ ಇದ್ದನು. ಅದು ಆನುವಂಶೀಕವೇ ಎಂದು ಕಂಡು ಹಿಡಿಯಲು ಪ್ರಯೋಗಗಳನ್ನು ನಡೆಸುತ್ತಲೇ ಇದ್ದನು.

೧೮೮೫ ರಲ್ಲಿ ಬೆಲ್ ದಂಪತಿಗಳು ಮಕ್ಕಳೊಡನೆ, ನ್ಯೂ ಫೌಂಡ್‌ಲೆಂಡಿಗೆ ಪ್ರವಾಸ ಹೊರಟರು. ದೋಣಿ ನಡುವೆ ಮುರಿದು ಅವರು ಕೇಪ್ ಬ್ರಿಟನ್‌ನಲ್ಲಿ ಉಳಿಯಬೇಕಾಯಿತು. ಆ ತೀರ, ಅಲ್ಲಿಯ ಶಾಂತವಾತಾವರಣ, ಅವರನ್ನು ಪೂರ್ತಿಯಾಗಿ ಸೆರೆ

ಹಿಡಿಯಿತು. ಅಲ್ಲಿಯೇ ಮನೆಮಾಡಿಕೊಂಡು ಇದ್ದುಬಿಟ್ಟರು ಅಲ್ಲಿಯೇ ಬೆಲ್ ಒಂದು ಪ್ರಯೋಗಶಾಲೆಯನ್ನು ಕಟ್ಟಿಕೊಂಡನು. ಬೇಕೆನಿಸಿದ ಕ್ಷೇತ್ರದಲ್ಲಿ, ಬೇಕಾದ ಪ್ರಯೋಗಗಳನ್ನು ಮಾಡಿ ಕೊಳ್ಳುತ್ತಿದ್ದನು. ಸಮುದ್ರದ ನೀರಿನಿಂದ ಶುದ್ಧ ನೀರನ್ನು ಪಡೆ ಯುವುದರಿಂದ ಹಿಡಿದು ಕುರಿಸಾಕಣೆವರೆಗೆ ಅವನ ಕ್ಷೇತ್ರ ವಿಸ್ತರಿಸಿತ್ತು. ಶಸ್ತ್ರಚಿಕಿತ್ಸೆಯ ಅನುಕೂಲಕ್ಕಾಗಿ ಅವನು ಮಾಡಿದ್ದ ವಿದ್ಯುತ್ ಸಲಕರಣೆಯನ್ನು ಇಂದು ಕ್ಷ–ಕಿರಣಗಳು ಹಿಮ್ಮೆಟ್ಟಿಸಿವೆ. ಆದರೆ ಅವನು ಸುಮ್ಮನೆ ಕುಳಿತಿರಲಿಲ್ಲವೆಂಬು ದಕ್ಕೆ ಸಾಕ್ಷಿಯಾಗಿ, ಅವನ ನಿರಂತರ, ಚಟುವಟಿಕೆಗಳ ಗುರುತಾಗಿ ಅವನು ಮಾಡಿದ ಪ್ರಯೋಗಗಳಿವೆ. ಪ್ರತಿಧ್ವನಿಯಿಂದ ಮಂಜಿನ ಕಲ್ಲುಗಳನ್ನು ಗುರುತಿಸುತ್ತಿದ್ದನು. ಎಡಿಸನ್ ಪ್ರಯೋಗಮಾಡಿ, ಒಂದೊಂದೇ ಉಪಕರಣಗಳನ್ನು ದೇಶಕ್ಕೆ ಕೊಡುತ್ತಿದ್ದಂತೆಯೇ, ಅವನ್ನು ತಾನೂ ಮಾಡಿ ಉತ್ತಮ ಪಡಿಸುವ ಪ್ರಯತ್ನವನ್ನು ಮಾಡುತ್ತಿದ್ದನು. ಗಾಳಿಪಟ, ಬೆಲೂನ್‌ಗಳೊಂದಿಗೆ ಸಾಕಷ್ಟು ಪ್ರಯೋಗಗಳನ್ನು ನಡೆಸಿದ್ದನು. ಅವನಿಗೂ ಹಾರಾಡುವ, ಹಾರಾಡಿಸುವ ಯಂತ್ರವನ್ನು ಕಂಡು ಹಿಡಿಯುವ ಅಭಿಲಾಷೆ ಇತ್ತೆಂದು ಕಾಣುತ್ತದೆ.

೧೯೧೭ ರಲ್ಲಿ ಕೆನಡಾದ ಪ್ರಜೆಗಳು ಅವನನ್ನು ಗೌರವಿಸಿದಾಗ, ಅವನು ಮನದುಂಬಿ ಮಾತನಾಡಿದನು. "೧೮೭೦ ರಲ್ಲಿ ನಾನು ಇಲ್ಲಿಗೆ ಸಾಯಲು ಬಂದೆ. ಇಂದು ನಿಮ್ಮ ಸಂತಸದ ನಡುವೆ ನಾನೂ ಭಾಗಿಯಾಗಲು ಬದುಕಿದ್ದೇನೆ. ದೂರವಾಣಿಯ ಬಗ್ಗೆ ಕನಸು ಕಂಡ ಸ್ಥಳವಿದು. ಇದು ಉಗಮಸ್ಥಾನ. ಬೋಸ್ಟನ್ ನಲ್ಲಿ ಅದು ಹರಿಯಿತು...."

೧೯೨೨ ರ ಆಗಸ್ಟ್ ೨ ರಂದು ಅಲೆಗ್ಸಾಂಡರ್ ಗ್ರಹಾಂಬೆಲ್

ಕಾಲವಾದನು. ಕೇಪ್ ಬ್ರಿಟನ್‌ನಲ್ಲಿ ಅವನ ಸಮಾಧಿಯಾಯಿತು. ಅಂದು ಅವನ ಆತ್ಮಕ್ಕೆ ಶಾಂತಿ ಕೋರಿ ಬೆಲ್ ದೂರವಾಣಿ ಕೇಂದ್ರವು ಒಂದು ನಿಮಿಷ ಕೆಲಸ ನಿಲ್ಲಿಸಿ ಮೌನವಾಚರಿಸಿತು. ಅಮೇರಿಕಾದ ವ್ಯವಹಾರ ವಿಭಾಗ ಆ ಒಂದು ನಿಮಿಷ ಸ್ತಬ್ಧವಾಗಿದ್ದಿತು.

ಶಬ್ದ ಪ್ರಪಂಚದಲ್ಲಿಯೇ ತನ್ನ ಸಂತಸವನ್ನು ಕಂಡ ತನ್ನ ಜೀವನವನ್ನು ಕಳೆದವನ ಸಂಗಾತಿ ಪೂರ್ತಿಯಾಗಿ ಶಬ್ದ ಪ್ರಪಂಚಕ್ಕೆ ಎರವಾಗಿದ್ದುದು ವಿಧಿನಿಯಾಮಕವೋ, ಅಥವಾ ವಿಧಿಯ ಅಣಕವೋ ? ಗ್ರಹಾಂಬೆಲ್‌ಗೆ ಮಾತ್ರ ಇದರ ನೆನಪೇ ಇರುತ್ತಿರಲಿಲ್ಲ. ಅವನ ಶಿಷ್ಯೆ ಅಷ್ಟರ ಮಟ್ಟಿಗೆ ತಯಾರಾಗಿ ಬಿಟ್ಟಿದ್ದಳು. ಅವರು ಸಂಗೀತದ ಬಗ್ಗೆ, ಶಬ್ದಗಳ ಬಗ್ಗೆ ಬೇಕಾದಷ್ಟು ಚರ್ಚಿಸುತ್ತಿದ್ದರು. ಸಂಗೀತ ಪ್ರಪಂಚವನ್ನೇ ಅರಿಯದ ಮಾಬಲ್, ಬಹುಶಃ ಬರಿಯ ಕಲ್ಪನೆಯ ಮಾತ್ರದಿಂದ ಚರ್ಚೆಯಲ್ಲಿ ಭಾಗವಹಿಸುತ್ತಿದ್ದಳು.

ಅವರಿಗೆ ಎಲಿಸ ಮೇ ಮತ್ತು ಮೇರಿಯಾ ಎಂದು ಇಬ್ಬರು ಹೆಣ್ಣುಮಕ್ಕಳಿದ್ದರು. ಬುದ್ಧಿ ತಿಳಿದ ಮೇಲೂ ಅವರಿಗೆ ತಮ್ಮ ತಾಯಿಯ ನ್ಯೂನತೆ ತಿಳಿದಿರಲಿಲ್ಲ. ಚಿಕ್ಕಂದಿನಿಂದ ಎದುರಿಗೇ ನಿಂತು ಮಾತನಾಡುವ ಪಾಠವಾಗಿದ್ದಿತು ಅವರಿಗೆ. ಯಾರೂ ಮಾಬಲ್‌ಳ ಕಿವುಡಿನ ಬಗ್ಗೆ ಅವರಿಗೆ ಹೇಳಿರಲಿಲ್ಲ.

ಒಮ್ಮೆ ಮೇರಿಯಾ ಖಾಯಿಲೆಯಿಂದ ಮಲಗಿಬಿಟ್ಟಳು. ತಾಯಿ ಕೋಣೆಯೊಳಗೆ ಬಂದಾಗ, ಮಗಳು ನಿದ್ರೆ ಬಂದಂತೆ ನಟಿಸಿಬಿಟ್ಟಳು. ಎಚ್ಚರಮಾಡುವ ಮನಸ್ಸಿಲ್ಲದೆ ತಾಯಿ ಹಿಂದುರಿಗಿದಾಗ, "ಅಮ್ಮಾ" ಎಂದಳು ಮೇರಿಯಾ. ತಾಯಿ ಕೋಣೆಯ

ಬಾಗಿಲನ್ನು ಎಳೆದುಕೊಂಡು ಹೊರಗೆ ಹೋಗಿಬಿಟ್ಟಳು. ತಾಯಿಯ ಈ ವರ್ತನೆಯಿಂದ ನೊಂದ ಮಗಳು, ತನ್ನ ಬಗ್ಗೆ ತಾಯಿಗೆ ತಿರಸ್ಕಾರವೆಂದು ಬಗೆದು ಅತ್ತುಬಿಟ್ಟಳು. ದುಃಖ ಸಹಿಸಲಾರದೆ 'ಅಮ್ಮಾ' ಎಂದು ಅರಚಿಕೊಂಡುಬಿಟ್ಟಳು. ಆಗ ಒಳಗೆ ಬಂದ ತಂದೆ ನಡೆದದ್ದನ್ನು ಕೇಳಿ, ಮಗಳಿಗೆ ಸಂದರ್ಭ ವನ್ನು ವಿವರಿಸಿದನು. ಆಗ ಮಾಬಲ್‌ಳ ಬಗ್ಗೆ ಹೇಳಲೇ ಬೇಕಾಯಿತು.

ತಾಯಿಗೆ 'ಕಿವಿ'ಗಳಾಗಲು ಇಬ್ಬರೂ ಪ್ರಯತ್ನಿಸಿದರು. ದೂರವಾಣಿಯಲ್ಲಿ ಮಾತನಾಡುವವರ ಸಂದೇಶವನ್ನು ತಾವೇ ಉಚ್ಚರಿಸಿ ತಾಯಿಗೆ 'ಕಾಣಿಸು'ತ್ತಿದ್ದರು.

ಸಾಮಾನ್ಯವಾಗಿ ಅವಳ ನ್ಯೂನತೆಯನ್ನು ಅವಳ ಸುತ್ತಲೂ ಇರುವವರು ಮರೆತುಬಿಡುತ್ತಿದ್ದರು. ಇದಕ್ಕೆ ಬಹುವಾಗಿ ಮಾಬಲ್‌ಳ ನಿರಾಳವಾದ, ನಿರಾತಂಕವಾದ ಬದುಕೇ ಕಾರಣ. ಒಮ್ಮೆ ಅವಳ ಮಗಳು ಸತ್ಕಾರ ಕೂಟವೊಂದನ್ನು ಏರ್ಪಡಿಸಿ, "ಅಮ್ಮ ಹಾಡುವವರನ್ನು ಎಲ್ಲಿ ಕೂರಿಸಿದರೆ ಎಲ್ಲರಿಗೂ ಚೆನ್ನಾಗಿ ಸಂಗೀತ ಕೇಳಿಸುತ್ತದೆ?" ಎಂದು ಕೇಳಿದಳು. ಮಾಬಲ್ ನಕ್ಕು "ಎಂತಹ ಪ್ರಶ್ನೆ ಕೇಳುತ್ತೀಯೆ. ನನಗೆ ಒಂದು ಸ್ವರವೂ ಕೇಳಿಸುವುದಿಲ್ಲ ಎಂದು ನಿನಗೆ ತಿಳಿಯದೇ?" ಎಂದು ನುಡಿದಾಗ ಎಲಿಸ ಮೋ ಮೂಕಳಾದಳು.

ಅಲೆಕ್‌ನ ಎಲ್ಲ ಪ್ರಯೋಗಗಳನ್ನೂ, ಹೊಸ ಅಭಿಪ್ರಾಯ ಗಳನ್ನೂ ಮಾಬಲ್ ಆಸಕ್ತಿಯಿಂದ ನೋಡುತ್ತಿದ್ದಳು, ಕೇಳು ತ್ತಿದ್ದಳು. ಅವನ ಎಲ್ಲಾ ಕಾರ್ಯಗಳಲ್ಲಿಯೂ ಗುಪ್ತಗಾಮಿನಿ ಯಂತೆ ಅವಳ ಸಹಕಾರ ಇದ್ದೇ ಇರುತ್ತಿತ್ತು.

ಕಿವುಡರ ಬಗ್ಗೆ ಅವನ ಅನುಕಂಪ ಒಮ್ಮೆಯೂ ಕಡಿಮೆ

ಯಾಗಲಿಲ್ಲ. ಹೆಲನ್ ಕೆಲರ್‌ಳ ಬಗ್ಗೆ ಅವಳ ತಂದೆ ತಾಯಿಗಳು ನಿರಾಶರಾದಾಗ, ವರಗುರು ಆ್ಯನಿ ಸಲ್ಲಿವಾನ್‌ಳ ಹತ್ತಿರ ಅವರನ್ನು ಕಳುಹಿಸಿದವನು ಅಲೆಗ್ಸಾಂಡರ್ ಗ್ರಹಾಂಬೆಲ್. ಅಂತೆಯೇ ಮುಂದೆ ಅವನು, ಅವಳ ಹಿರಿಯ ಗೆಳೆಯನಾಗಿ ಉಳಿದನು. ಕಿವುಡರ 'ಕಿವಿ'ಗಾಗಿ ಅವನ ಪ್ರಯೋಗ ನಿರಂತರವಾಗಿ ಸಾಗಿಯೇ ಇತ್ತು.

ಎಡಿಸನ್ ನಿರ್ಮಿಸಿದ ಗ್ರಾಮೋಫೋನನ್ನು ಬಹಳವಾಗಿ ಉತ್ತಮಪಡಿಸಿ ಅದರಲ್ಲಿದ್ದ ಉರುಳೆ ರಿಕಾರ್ಡ್‌ನ್ನು ತೆಗೆದು ತಿರುಗುವ ತಟ್ಟೆಯಾಕಾರದ ರಿಕಾರ್ಡನ್ನು ಜೋಡಿಸಿದನು. ಅವನಿಗೆ ತನ್ನ ಕಂಪೆನಿ ಬಹಳವಾಗಿ ಲಾಭವನ್ನು ಕೊಡಲಾರಂಭಿಸಿತು. ಅದರ ಒಂದು ಪಾಲನ್ನು ಅಲೆಕ್ ಕಿವುಡರ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಿದನು. ಮತ್ತೊಂದು ಪಾಲಿನಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದನು. ಅಲ್ಲಿ ಕಿವುಡ ಮಕ್ಕಳು ಎಲ್ಲ ಮಕ್ಕಳೊಡನೆ ಸೇರಿ ಆಟ ಪಾಠಗಳನ್ನುಕಲಿಯಲು ಅವಕಾಶ ಮಾಡಿದನು. ಮಾಬಲ್‌ಳ ಯಶಸ್ಸು ಈ ಕಲಸಕ್ಕೆ ಸ್ಫೂರ್ತಿಯಾಗಿರಬೇಕು. ದಂಪತಿಗಳ ಹೊಂದಾಣಿಕೆ, ಸಾವಿನಲ್ಲೂ ಇಣುಕಿತು. ಅವನು ಕಾಲವಾದ ಐದೇ ತಿಂಗಳ ನಂತರ ಮಾಬಲ್ ಅವನನ್ನು ಕೂಡಿಕೊಂಡಳು. ಅವರ ಸಮಾಧಿಯ ಮೇಲೆ ತಾರೀಖಿನ ಜೊತೆಗೆ 'ಅನ್ವೇಷಕ ಅಲೆಗ್ಸಾಂಡರ್ ಗ್ರಹಾಂಬೆಲ್ ಮತ್ತು ಅವನ ಪ್ರೇಯಸಿ ಮಾಬಲ್ ಹಬ್ಬರ್ಡ್ ಬೆಲ್' ಎಂದಷ್ಟೆ ಕೆತ್ತಿದ್ದಾರೆ. ಅದು ಅವರ ಅನ್ಯೋನ್ಯದ ಮೂಕ ಸಂಕೇತದಂತೆ ನಿಂತಿದೆ. ತನ್ನ ನಿಶ್ಶಬ್ದ ಪ್ರಪಂಚದಲ್ಲಿ, ಇನಿಯನೊಡನೆ ಉತ್ಸಾಹದಿಂದ, ತನಗೆ ಕೇಳದ ಹಾಡನ್ನು ಹಾಡಿದಳು ಮಾಬಲ್.

ಅವನಿಗೆ ಬಂದ ಅಪಾರ ಹಣ, ಅವನನ್ನುಳಿದು, ಬೇರೆ ವ್ಯವ

ಹಾರಜ್ಞರನ್ನು ಆಕರ್ಷಿಸಿತು. ಅವರು ಅಲೆಕ್‌ನನ್ನು ವ್ಯಾಪಾರಕ್ಕಿಳಿಯಲು, ಹೆಚ್ಚು ಲಾಭ ಪಡೆಯಲು ಪ್ರಚೋದಿಸಿದರು. ಆದರೆ ವ್ಯವಹಾರ ಜೀವನದ ಕಹಿ ಅವನಿಗೆ ಬೇಡವಾಯಿತು. ದೊಡ್ಡ ಸಿಗಾರ್‌ಗಳಾಗಲೀ, ದೊಡ್ಡ ಮನೆಯಾಗಲೀ ಅವನನ್ನು ಆಕರ್ಷಿಸಲಿಲ್ಲ. ಪ್ರಯೋಗಶಾಲೆ ಅವನಿಗೆ ಪ್ರಿಯವಾದ ಸ್ಥಾನವಾಯಿತು. ಅಲ್ಲಿ ಇಲ್ಲಿ ಷೇರುಗಳನ್ನು ಕೊಂಡು ಕೋಟ್ಯಾಧೀಶ್ವರನಾಗಬಹುದಾಗಿದ್ದ ಅಲೆಕ್ ಕಿವುಡರ ಗುರುವಾಗಿಯೇ ಉಳಿಯಲಿಷ್ಟಪಟ್ಟನು. ಅವನೆಂದೂ ತನ್ನ ಅನ್ವೇಷಣೆಯ ಬಗ್ಗೆ ಪ್ರತಿಷ್ಠೆಯ ಮಾತನಾಡಲಿಲ್ಲ. "ನಾನು ಬೇರೆ ಕ್ಷೇತ್ರದಲ್ಲಿದ್ದರೆ ಈ 'ಹುಚ್ಚು' ನನಗೆ ಬಹುಶಃ ಬರುತ್ತಿರಲಿಲ್ಲ. ಈ ದೂರವಾಣಿ ಇಂದು ಪರಿಪೂರ್ಣವಾಗಿದ್ದರೆ, ಸರ್ವಜನೋಪಕಾರಿಯಾಗಿದ್ದರೆ ಅದು ನನ್ನೊಡನಾಡಿಗಳ ನಿಸ್ವಾರ್ಥ ಸಹಕಾರದಿಂದ ಮಾತ್ರ" ಎಂದು ತನ್ನ ಸಹಜವಾದ ವಿನಯದಿಂದ ಹೇಳಿಕೊಂಡಿದ್ದಾನೆ.

ತನ್ನ ಪ್ರಿಯತಮೆಗೆ ಒಂದು ಕಿವಿಯಡಕ ಮಾಡುವುದಾಗಿ ಮಾತುಕೊಟ್ಟ ಅಲೆಕ್ ಜನರಿಗೆ ದೂರವಾಣಿಯನ್ನು ಕೊಟ್ಟನು. ಮಾಬಲ್ ಶಬ್ದವನ್ನೂ, ಸಂಗೀತವನ್ನೂ ಕೇಳದಯೇ ಅಮರಳಾದಳು.

ಅನುಬಂಧ


ದೂರವಾಣಿಯ ಸಂಪರ್ಕದಿಂದ, ಇಂದು ಜನ ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಸಂಬಂಧಪಟ್ಟವರಿಗೆ ತಿಳಿಸಬಹುದು. ಬರ್ನಾರ್ಡ್ ಷಾ ತನ್ನ ೨೩ ನೇಯ ವಯಸ್ಸಿನಲ್ಲಿ ಲಂಡನ್ನಿನ 'ಎಡಿಸನ್' ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದರು. ಆಗತಾನೆ ಅವರು ಸಾಹಿತ್ಯ ಪ್ರಪಂಚಕ್ಕೆ ಕಾಲಿಡುತ್ತಿದ್ದರು. ಅವರು ದೂರವಾಣಿಯನ್ನು ಕುರಿತು "ನಿಮ್ಮ ಅತಿ ವೈಯಕ್ತಿಕ ವಿಚಾರವನ್ನು ಬಹಳ ದೂರದವರೆಗೂ ಕಳುಹಿಸುವ ಸಾಧನ" ಎಂದಿದ್ದಾರೆ.

೧೮೭೮ ರಲ್ಲಿ ಬೆಲ್ ಕಂಪೆನಿ ಮೊದಲಬಾರಿಗೆ ವಿನಿಮಯ ಕೇಂದ್ರವನ್ನು ಸ್ಥಾಪಿಸಿತು. ಇದರಿಂದಾಗಿ ಸಂಭಾಷಿಸುವವರು ಬೇರೆ ಬೇರೆಯಾಗಿ ಸಂಪರ್ಕವಿಟ್ಟುಕೊಳ್ಳಬೇಕಾದ ಪ್ರಸಂಗ ತಪ್ಪಿತು. ಇದರಲ್ಲಿ ಎಲ್ಲ ಚಂದಾದಾರರಿಗೂ ಕೇಂದ್ರ ಒಂದರಿಂದ ಸಂಪರ್ಕವಿರುತ್ತದೆ. ಮಾತನಾಡ ಬಯಸುವವರು ತಮ್ಮ ದೂರವಾಣಿಯನ್ನು ಎತ್ತಿದರೆ, ಅವರಿಗೂ — ವಿನಿಮಯ ಕೇಂದ್ರಕ್ಕೂ ಸಂಪರ್ಕವೇರ್ಪಡುತ್ತದೆ. ತಮಗೆ ಬೇಕಾದವರ ದೂರವಾಣಿ ಸಂಖ್ಯೆಯನ್ನು ಹೇಳಿದರೆ ವಿನಿಮಯ ಕೇಂದ್ರದವರು ಆ ಸಂಖ್ಯೆಗೆ ಸಂಪರ್ಕ ಏರ್ಪಡಿಸಿಕೊಡುತ್ತಾರೆ. ಇಷ್ಟು ಕೆಲಸ ಒಂದೆರಡು ನಿಮಿಷಗಳಲ್ಲಿ ನಡೆಯುತ್ತದೆ. ಅನಂತರ ಗೆಳೆಯರು ನೇರವಾಗಿ ಸಂಭಾಷಿಸಬಹುದು.

ಇತ್ತೀಚೆಗೆ ದೂರವಾಣಿ ಇನ್ನಷ್ಟು ಮುಂದುವರೆದಿದೆ. ವಿನಿಮಯ ಕೇಂದ್ರದ ಕೆಲಸವೆಲ್ಲಾ ತಾನೇತಾನಾಗಿ ನಡೆದು ಹೋಗುತ್ತದೆ. ಇದನ್ನು ಸ್ವಯಂಚಾಲಿತ ವಿನಿಮಯ ಕೇಂದ್ರ

ವೆಂದು (Automatic-exchange) ಕರೆಯುತ್ತಾರೆ. ಇದರಲ್ಲಿ ನೇರ ಸಂಪರ್ಕ ವಿಧಾನ (Direct-dialing system) ವುಂಟು.

ಅಂದಿನ ದೂರವಾಣಿ :



ಚಿತ್ರ : ೧

ಪ್ರೇಷಕಕ್ಕೆ ಜೋಡಿಸಿರುವ ಪರೆಯ ಮುಂದೆ ಮಾತನಾಡಿದಾಗ ಅದು ಗಾಳಿಯ ಸಾಂದ್ರತೆಯ ವ್ಯತ್ಯಾಸಕ್ಕನುಗುಣವಾಗಿ ಸ್ಪಂದಿಸುತ್ತದೆ. ಪರೆಗೆ ಜೋಡಿಸಿರುವ ತಾಮ್ರದ ಸುರುಳಿಯೂ ಸ್ಪಂದಿಸುತ್ತದೆ ಅಯಾಸ್ಕಾಂತದ ಸುತ್ತಲೂ ಇರುವ ಈ ಸುರುಳಿಯಲ್ಲಿ ಸ್ಪಂದಕ್ಕನುಗುಣವಾಗಿ ಏರಿಳಿಯುವ ವಿದ್ಯುತ್ ಪ್ರಚೋದಿಸಲ್ಪಡುತ್ತದೆ. ಈ ವಿದ್ಯುತ್ ತಂತಿಯ ಮೂಲಕ ಹರಿದು ವಿದ್ಯುತ್ಕಾಂತದ ಸಹಾಯದಿಂದ ಮತ್ತೊಂದು ಪ ಸ್ಪಂದಿಸುವಂತೆ ಮಾಡುತ್ತದೆ. ಸ್ಪಂದಿಸುತ್ತಿರುವ ಪರೆಯು

ಮೂಲಧ್ವನಿಯನ್ನು ಹೊರಡಿಸುತ್ತದೆ. ಇಲ್ಲಿ ಪ್ರತ್ಯೇಕವಾದ ವಿದ್ಯುತ್ಕೋಶದ ಬಳಕೆ ಇಲ್ಲ. ಆದ್ದರಿಂದ ಏರಿಳಿಯುವ ವಿದ್ಯುತ್ ಕೆಲವು ಬಾರಿ ಗುರುತಿಸಲಾರದಷ್ಟು ಕ್ಷೀಣವಾಗಿ ಬಿಡುತ್ತದೆ.

ಸುಧಾರಿಸಿದ ದೂರವಾಣಿ :


ಹೀಗೆ ಬೇಗ ಕ್ಷೀಣಿಸುವುದನ್ನು ತಪ್ಪಿಸಲು ಸುರುಳಿಯಲ್ಲಿ ಒಂದೇ ಸಮನಾದ ವಿದ್ಯುತ್ ಹರಿಯುವಂತೆಮಾಡಿ, ಅದರ ಮೇಲೆ ಧ್ವನಿ ಕಂಪನಕ್ಕನುಗುಣವಾಗಿ ಏರಿಳಿಯುವ ವಿದ್ಯುತ್‌ನ್ನು ಆವಿರ್ಭವಿಸಲಾಯಿತು. ಎಡಿಸನ್ ಇದನ್ನು ಇನ್ನೂ ಸುಧಾರಿಸಿದ.

ಈಗ ದೂರವಾಣಿ ಸಂಭಾಷಕದಲ್ಲಿ ಎರಡು ಭಾಗಗಳಿರುವುದು ಎಲ್ಲರಿಗೂ ತಿಳಿದಿದೆಯಷ್ಟೆ. ಒಂದರಲ್ಲಿ ನಾವು ಮಾತನಾಡುತ್ತೇವೆ (ಪ್ರೇಷಕ). ಮತ್ತೊಂದರಿಂದ ಕೇಳಿಸಿಕೊಳ್ಳುತ್ತೇವೆ (ಶ್ರಾವಕ).


ಪ್ರೇಷಕದಲ್ಲಿ ಒಂದು ಅಭ್ರಕದ ಪರೆ ಇರುತ್ತದೆ. ಅದಕ್ಕೆ ಜೋಡಿಸಿದಂತೆ ಒಂದು ಜೊತೆ ಪ್ಲಾಟಿನಂ ಹಾಳೆ ಇರುತ್ತದೆ. ಎರಡು ಹಾಳೆಗಳ ಮಧ್ಯದಲ್ಲಿ ಇಂಗಾಲದ ಪುಡಿ ಇರುತ್ತದೆ. ಇಂಗಾಲ ಒಳ್ಳೆಯ ವಿದ್ಯುದ್ವಾಹಕ. ಎರಡೂ ಪ್ಲಾಟಿನಂ ಹಾಳೆಗಳನ್ನು ವಿದ್ಯುತ್‌ಕೋಶಕ್ಕೆ ಸೇರಿಸಿರುವುದರಿಂದ, ಇಂಗಾಲದ ಪುಡಿಯ ಮೂಲಕ ಒಂದೇ ಸಮನಾದ ವಿದ್ಯುತ್ ಹರಿಯುತ್ತಿರುತ್ತದೆ. ಅಭ್ರಕದ ಪರೆಯ ಮುಂದೆ ಮಾತನಾಡಿದಾಗ ಅದು ಸ್ಪಂದಿಸುತ್ತದೆ. ಅದರ ಹಿಂದಕ್ಕೆ ಜೋಡಿಸಿರುವ ಪ್ಲಾಟಿನಂ ಹಾಳೆಯೂ ಕಂಪಿಸುತ್ತದೆ. ಇದರಿಂದ ಇಂಗಾಲದ ಪುಡಿಯಲ್ಲಿ ಸೂಕ್ಷ್ಮವಾಗಿ ಸಾಂದ್ರತೆಯ ವ್ಯತ್ಯಾಸ ಉಂಟಾಗುತ್ತದೆ.

ಸಾಂದ್ರತೆಯ ವ್ಯತ್ಯಾಸಕ್ಕನುಗುಣವಾಗಿ ಇಂಗಾಲದ ವಿದ್ಯುದ್ವಾಹಕತೆ ವ್ಯತ್ಯಾಸವಾಗುವುದರಿಂದ, ಅದರ ಮೂಲಕ ಹರಿಯುತ್ತಿರುವ ವಿದ್ಯುತ್ ಏರಿಳಿಯಲು ಆರಂಭಿಸುತ್ತದೆ. ಈ ಏರಿಳಿಯುವ ವಿದ್ಯುತ್ ಪುಷ್ಟಿಗೊಂಡು ಮುಂದೆ ತಂತಿಯ ಮೂಲಕ ಸಾಗುತ್ತದೆ.

ಶ್ರಾವಕದಲ್ಲಿ ಹಿಂದಿನ ವಿದ್ಯುತ್ಕಾಂತದ ಬದಲಿಗೆ ಒಂದು ಶಾಶ್ವತ ಅಯಸ್ಕಾಂತ ವಿರುತ್ತದೆ. ಪ್ರೇಷಕದಿಂದ ಬರುತ್ತಿರುವ ಏರಿಳಿಯುವ ವಿದ್ಯುತ್ ಶಾಶ್ವತ ಅಯಸ್ಕಾಂತದ ಸುತ್ತಲೂ ಇರುವ ಸುರುಳಿಯ ಮೂಲಕ ಪ್ರವಹಿಸುವಾಗ, ಅದರ ಕಾಂತ ಕ್ಷೇತ್ರ ವ್ಯತ್ಯಾಸವಾಗಿ, ಮುಂದಿರುವ ಕಬ್ಬಿಣದ ತೆಳುಪರೆ ಸ್ಪಂದಿಸುತ್ತದೆ. ಕಿವಿಯ ಬಳಿಯಲ್ಲಿ ಸೂಕ್ಷ್ಮವಾಗಿ ಸ್ಪಂದಿಸುತ್ತಿರುವ ಈ ಪರೆ ಮೂಲ ಧ್ವನಿಯನ್ನು ನಮಗೆಕೇಳುವಂತೆ ಮಾಡುತ್ತದೆ.



ಚಿತ್ರ: ೨ (ಪ್ರೇಷಕ) 1—ಧ್ವನಿ 2—ಪ್ಲಾಟಿನಂ ಹಾಳೆ
3—ಇಂಗಾಲದ ಪುಡಿ 4—ಅಭ್ರಕದ ಪರೆ 5—ವಿದ್ಯುತ್ ಕೋಶ



ಚಿತ್ರ : ೩ (ಶ್ರಾವಕ)
1—ಏರಿಳಿಯುವ ವಿದ್ಯುತ್ 2—ಶಾಶ್ವತ ಅಯಸ್ಕಾಂತ
3—ಕಬ್ಬಿಣದ ಪರೆ

ಸ್ವಯಂ ಚಾಲಿತ ವಿನಿಮಯ ಕೇಂದ್ರ :

ಇಷ್ಟು ಓದಿದಮೇಲೆ, ನಮ್ಮ ದೂರವಾಣಿಯನ್ನು ಎತ್ತಿ ಅದರ ಮುಖ ಬಿಲ್ಲೆಯನ್ನು ತಿರುಗಿಸಿದರೆ ಮುಂದೇನಾಗುತ್ತದೆ, ಎಲ್ಲೆಲ್ಲಿ ಏನೇನಾಗುತ್ತದೆ? ಅಷ್ಟು ಬೇಗ ನಮಗೆ ಬೇಕಾದ ಸಂಖ್ಯೆಯ ದೂರವಾಣಿಯೊಡನೆ ಹೇಗೆ ಸಂಪರ್ಕ ಸಿಗುತ್ತದೆ ಎಂದು ತಿಳಿದುಕೊಳ್ಳುವ ಕುತೂಹಲ ನಿಮಗೆ ಉಂಟಾಗುತ್ತದೆ. ಅದಕ್ಕೆ ಮುಂದೆ ಓದಿ:


ಇಲ್ಲಿ ಮುಖ್ಯವಾಗಿ ಕೆಲಸ ಮಾಡುವುದು ಎರಡು ಮಾದರಿಯ ಸ್ವಯಂ ಚಾಲಿತ ಸಂಬಂಧಕಗಳು. (Switches) 1. ಪಥ ಅನ್ವೇಷಕ (Line finder switch) 2. ಸಂಯೋಜಕ (Connector switch).


ಒಂದು ನಗರದಲ್ಲಿ ನೂರು ದೂರವಾಣಿ ಸಂಭಾಷಕಗಳಿವೆ ಯಾದರೆ ಅವೆಲ್ಲಕ್ಕೂ ಒಂದು ವಿನಿಮಯ ಕೇಂದ್ರವಿರುತ್ತದೆ. ಅಂದರೆ ಎಲ್ಲ ಸಂಭಾಷಕಗಳಿಂದ ವಿನಿಮಯ ಕೇಂದ್ರಕ್ಕೆ ತಂತಿ

ಸಂಪರ್ಕವಿರುತ್ತದೆ. ಒಂದೊಂದು ಮನೆಯಿಂದ ಬರುವ ತಂತಿಯೂ ಪಥ ಅನ್ವೇಷಕದ ಒಂದೊಂದು ತುದಿ (Terminal)ಗೆ ಸೇರಿರುತ್ತದೆ. ಯಾರಾದರೊಬ್ಬರು ತಮ್ಮ ಸಂಭಾಷಕವನ್ನು ಎತ್ತಿಕೊಂಡಾಗ ಅಲ್ಲಿಂದ ಸಂಬಂಧಕದ ಕೊನೆಗೆ ವಿದ್ಯುತ್ ಹರಿಯುತ್ತದೆ (೪ ನೇ ಚಿತ್ರದ 'ಅ' ಸೂಚಕ) ಈ ವಿದ್ಯುತ್ ಅದರ ಸ್ಪರ್ಶಕ (Contact arm)ವನ್ನು ಪ್ರಚೋದಿಸುತ್ತದೆ. ೪ ನೇ ಚಿತ್ರದ 'ಆ' ಸೂಚಕ) ಇದು ತಿರುಗುತ್ತಾ ಮೇಲಕ್ಕೆ ಅಥವಾ ಕೆಳಕ್ಕೆ ಕಂಬಿಯುಗುಂಟ ನಡೆದು ಪ್ರೇಶಿತ ತುದಿ (ಅ) ಯನ್ನು ಮುಟ್ಟಿನಿಲ್ಲುತ್ತದೆ. ಈಗ ಸಂಭಾಷಕಕ್ಕೂ ಸಂಯೋಜಕ್ಕೂ ಸಂಬಂಧವೇರ್ಪಡುತ್ತದೆ. ಕೇಂದ್ರವು, ತಾನು ಸೇವೆಗೆ ತಯಾರಾಗಿರುವ ಸಂಕೇತವನ್ನು ಸಂಭಾಷಕಕ್ಕೆ ಕೊಡುತ್ತದೆ. ಈ ಕೆಲಸ ಒಂದೆರಡು ಕ್ಷಣಗಳಲ್ಲಿ ನಡೆಯುತ್ತದೆ. ಈ ಸಂಕೇತ ಬಂದಮೇಲೆ ಅವರು ತಮಗೆ ಬೇಕಾಗಿರುವ ಸಂಖ್ಯೆಯನ್ನು ಡಯಲ್ ಮಾಡಬಹುದು. ಸಂಯೋಜಕವು ಪಥ ಅನ್ವೇಷಕದಂತೆಯೇ ಕಾಣುತ್ತದೆ. ಪ್ರತಿ ದೂರವಾಣಿ ಸಂಭಾಷಕಕ್ಕೂ ಇದಕ್ಕೂ ಸಂಪರ್ಕವಿರುತ್ತದೆ. ಡಯಲ್ ಮಾಡಿದಮೇಲೆ ನಡೆಯುವ ಕ್ರಿಯೆಯನ್ನು ಒಂದು ಉದಾಹರಣೆಯೊಡನೆ ತಿಳಿಯುವುದು ಸುಲಭ.

ಈಗ ನೀವು ೮೨ ನೇ ಸಂಖ್ಯೆಗೆ ಡಯಲ್ ಮಾಡಬೇಕೆಂದು ಕೊಳ್ಳಿರಿ. ನಿಮ್ಮ ಸಂಭಾಷಕವನ್ನು ಎತ್ತಿಕೊಳ್ಳಿ. ನಿಮಗೆ ಕೇಂದ್ರದಿಂದ ಸಂಕೇತ ಬರುತ್ತದೆ. ನಿಮಗೂ ಸಂಯೋಜಕಕ್ಕೂ ಸಂಪರ್ಕವೇರ್ಪಟ್ಟಿದೆ. ಈಗ ನೀವು ೮ ನ್ನು ಡಯಲ್ ಮಾಡಿ. ಅದರಲ್ಲಿಯ ಸ್ಪರ್ಶಕ (೫ ನೇ ಚಿತ್ರದ 'ಆ' ಸೂಚಕ) ವು ೮ ನೇ ಪಂಕ್ತಿಗೆ ಬಂದು ತಲುಪುತ್ತದೆ. ೨ ನ್ನು ಡಯಲ್ ಮಾಡಿ.

ಚಿತ್ರ : ೫





ಚಿತ್ರ : ೬

ಸಂಯೋಜಕವೂ ೧೦೦ ದೂರವಾಣಿ ಸಂಭಾಷಕಗಳೊಡನೆ ಸಂಪರ್ಕ ಪೊಂದಿರುತ್ತದೆ. ಅದು ೭೫೦೦ ರಿಂದ ೭೫೯೯ ರ ವರೆಗಿರುವ ಎಲ್ಲಾ ಸಂಖ್ಯೆಗಳಿಗೂ ಸೇರುತ್ತದೆ. ಎರಡನೇ ಆಯ್ಕೆ ಸಂಭಂಧಕದ ಸ್ಪರ್ಶಕವು ಈ ೧೦೦ ರಲ್ಲಿ ಉಪಯೋಗಿಸಲ್ಪಡದ ಒಂದು ತುದಿಗೆ ನಿಮ್ಮನ್ನು ಸೇರಿಸುತ್ತದೆ. (ಈ ನೂರೂ ಉಪ ಯೋಗವಾಗುತ್ತಿದ್ದರೆ ನಿಮಗೆ 'ಅವಿಶ್ರಾಂತ'ದ ಸಂಕೇತ ಬರುತ್ತದೆ.) ಈಗ ನೀವು ಆಯ್ದು ಕೊಳ್ಳಬೇಕಾದ ಕ್ಷೇತ್ರ ೧೦೦೦ ದಿಂದ ೧೦೦ಕ್ಕೆ ಇಳಿಯಿತು. ಈ ನೂರರಲ್ಲಿ ನಿಮಗೆ ಬೇಕಾದ ಸಂಖ್ಯೆಯನ್ನು ಸಂಯೋಜಕದ ಮೂಲಕ ಪಡೆಯಬಹುದು. ಮೂರನೇಯ ಅಂಕಿ ೬ ನ್ನು ಡಯಲ್ ಮಾಡಿದಾಗ ಸ್ಪರ್ಶಕವು ೬ ನೇಯ ಪಂಕ್ತಿಗೆ ಬಂದು, ನಾಲ್ಕನೇಯ ಅಂಕಿ ೩ನ್ನು ಡಯಲ್ ಮಾಡಿದಾಗ ೬ ನೇಯ ಪಂಕ್ತಿಯ ೩ ನೇಯ ತುದಿಗೆ ಬಂದು ನಿಲ್ಲುತ್ತದೆ. ಈಗ ನಿಮಗೂ, ೭೫೬೩ ರ ಸಂಭಾಷಕಕ್ಕೂ ಸಂಪರ್ಕವೇರ್ಪಟ್ಟು ೭೫೭೩ ರ ಸಂಭಾಷಕದ ಕರೆಗಂಟೆ ಬಾರಿಸುತ್ತದೆ.

ಇಷ್ಟು ಕ್ರಿಯೆಗಳೂ ನೀವು ಡಯಲ್ ಮಾಡಿದಾಗಲೆಲ್ಲಾ ನಡೆಯುತ್ತವೆ. ಇಷ್ಟು ಕೆಲಸ ನಡೆಯುತ್ತಿದೆ ಎಂಬ ಗುರುತು ಕೂಡ ಸಿಗದಷ್ಟು ವೇಗವಾಗಿಯೂ, ಅಚ್ಚುಕಟ್ಟಾಗಿಯೂ ಕೆಲಸ ನಡೆಯುತ್ತದೆ. ಒಬ್ಬ ಮನುಷ್ಯ ಅಲ್ಲಿದ್ದರೆ ಆಗಬಹುದಾದ ವಿಳಂಬ, ತಪ್ಪು ಯಾವುದೂ ಇಲ್ಲದೆ ಅವನೇ ನಿರ್ಮಿಸಿದ ಯಂತ್ರ, ತನ್ನ ಕೆಲಸ ನಿರ್ವಹಿಸುತ್ತದೆ.

ಸಂಭಾಷಕಗಳು ಹೆಚ್ಚಾದರೆ, ನಗರಗಳನ್ನು ವಲಯಗಳನ್ನಾಗಿ ವಿಂಗಡಿಸಿ, ಬೇರೆ ಬೇರೆ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಿಕೊಳ್ಳಬೇಕಾಗುತ್ತದೆ. ಹೀಗೆ ಏಳು ಅಂಕಿಗಳ ಸಂಖ್ಯೆ

ಗಳಿದ್ದರೆ, ಮೊದಲ ಮೂರು ಅಂಕಿಗಳು ನಿಮ್ಮನ್ನು ಒಂದು ವಲಯಕ್ಕೆ ಸೇರಿಸಿ ಉಳಿದ ೯೯ ವಲಯಗಳಿಂದ ಬೇರ್ಪಡಿಸುತ್ತದೆ. ಈಗ ನಿಮಗೆ ಬೇಕಾದ ಸಂಖ್ಯೆಯನ್ನು ಡಯಲ್ ಮಾಡಿದರೆ ಆ ವಲಯದ ಕೇಂದ್ರದಲ್ಲಿ ಕ್ರಮವಾಗಿ ಎಲ್ಲ ಕ್ರಿಯೆಗಳೂ ಜರುಗಿ, ನಿಮ್ಮ ಗೆಳೆಯರಿಗೂ ನಿಮಗೂ ಸಂಪರ್ಕ ಸಿಗುತ್ತದೆ.

ದೊಡ್ಡ ದೇಶಗಳಲ್ಲಿ ಈಗ ದೂರಕ್ಕೂ ನೇರವಾದ ಸಂಪರ್ಕಗಳು ಏರ್ಪಡುತ್ತಿವೆ. ಅಮೇರಿಕಾದ ಸಂಯುಕ್ತ ಸಂಸ್ಥಾನದ ಒಂದು ತುದಿಯಿಂದ ಮತ್ತೊಂದು ತುದಿಗೆ ನೇರವಾಗಿ ಮಾತನಾಡಬಹುದು. ಇಂತಹ ಸಂಧರ್ಭಗಳಲ್ಲಿ ಕೆಲವು ಹೆಚ್ಚು ಅಂಕಿಗಳನ್ನು ಡಯಲ್ ಮಾಡಬೇಕಾಗುತ್ತದೆ.

ಮೊದಲು ಒಂದು ವಲಯದ ಸಂಖ್ಯೆಯನ್ನು (ಇದು ಕೆಲವೆಡೆಗಳಲ್ಲಿ ಮೂರು ಅಂಕಿಗಳ ಸಂಖ್ಯೆಯಾಗಿರುತ್ತದೆ. ಉದಾ. ಚಿಕಾಗೋ ನಗರದ ಸಂಖ್ಯೆ ೩೧೨) ಡಯಲ್ ಮಾಡಬೇಕು. ಇಲ್ಲಿಂದ ನಿಮಗೆ ಬೇಕಾದ ವಲಯದ ಕೇಂದ್ರಕ್ಕೆ ಸಂಪರ್ಕವನ್ನು ಮತ್ತೆ ಕೆಲವು ಅಂಕಿಗಳನ್ನು ಡಯಲ್ ಮಾಡಿ ಪಡೆಯಬಹುದು. ಇದಾದ ನಂತರವೇ ನಿಮ್ಮ ಗೆಳೆಯರ ಸಂಖ್ಯೆಯನ್ನು ಡಯಲ್ ಮಾಡಿರಿ. ಇಬ್ಬರೂ ಮಾತನಾಡಿರಿ. ನಡುವೆ ಯಾವ ದೂರವಾಣಿ ನಿರ್ವಾಹಕರೂ ಬರುವುದಿಲ್ಲ. ಇಂತಹ ಕೇಂದ್ರಗಳಿಗೆ 'DDD' ಕೇಂದ್ರವೆನ್ನುತ್ತಾರೆ (Direct distance dialing). ದೂರ ಹೆಚ್ಚಿದರೆ, ವಿದ್ಯುಶ್ಶಕ್ತಿ ಕುಂದುತ್ತಾ ಹೋಗುತ್ತದೆ. ಅದರಿಂದ ಮಧ್ಯ ಮಧ್ಯದಲ್ಲಿ ಅವಕ್ಕೆ ಶಕ್ತಿಯನ್ನೊದಗಿಸುವ ಮಧ್ಯವರ್ತಿ ಯಂತ್ರಗಳನ್ನು ಜೋಡಿಸುವ ಅಗತ್ಯ ಬೀಳುತ್ತದೆ.

ಇನ್ನು ಮುಂದೆ, ನಿಮ್ಮ ದೂರವಾಣಿಯನ್ನು ಎತ್ತಿ, ಎಲ್ಲೆಲ್ಲಿ ಏನೇನು ನಡೆಯುತ್ತಿರಬಹುದೆಂದು ಕಲ್ಪಿಸಿಕೊಳ್ಳುತ್ತಾ, ಆ ಕೊನೆಯಿಂದ ಬರುವ ಪ್ರಶ್ನೆಗೆ ಉತ್ತರಿಸದೇ ನಿಂತೀರಿ............ ಅಲೆಗ್ಸಾಂಡರ್ ಗ್ರಹಾಂಬೆಲ್ ನಿಮ್ಮ ಕಾಲವನ್ನು ಉಳಿಸಿ ಕೊಟ್ಟಿದ್ದಾನೆ....ವ್ಯಯ ಮಾಡದಿರಿ........!

ಆಧಾರ ಗ್ರಂಥಗಳು

1. Listen, my heart—Helen waite
2. Inventors of the world—I. O. Evans
3. Men who changed the world
—Egon Larsen
4. The Story of Telephone
—J. M. Robertson
5. ವಿಜ್ಞಾನ ಪ್ರಪಂಚ—ಕೊ. ಶಿವರಾಮ ಕಾರಂತ